॥ श्रीः ॥

अनुवादप्रदीपः

भाग २

द्वितीयो भागः

(ಕನ್ನಡ ಆವೃತ್ತಿ)

श्रीसुरसरस्वतीसभा

शृङ्गेरि

२००६

रामकृष्णभट्टः कुटेलु
३।२२।२०

॥ श्रीः ॥

अनुवादप्रदीपः - २

द्वितीयो भागः

श्रीसुरसरस्वतीसभा
शृङ्गगिरिः

Anuvādapradīpaḥ - **Part Two** (Kannada Version)

A Text book on Sanskrit grammar, translation, essay and letter writing.

Year : 2007

Price : Rs. 15/-

© All rights reserved

Published by :

Sri Surasaraswathi Sabha (Regd.), Sringeri
Sri Shankar Mutt Premises,
Shankarapuram
Bangalore-560 004.
Ph.: 080-2242 5096

पुरे ग्रामे गृहे कृट्यां
बालो वृद्धो युवापि वा ।
करोतु संस्कृताभ्यासं
प्राप्नोतु ज्ञानसम्पदम् ॥

Printed at: Vagartha,. 149, 8th Cross, N.R. Colony, Bangalore-19. Ph.: 22427677

ಮುನ್ನುಡಿ

ಶೃಂಗೇರಿ ಶ್ರೀ ಶಾರದಾಪೀಠದ ಜಗದ್ಗುರುಗಳಾಗಿದ್ದ ಬ್ರಹ್ಮೈಕ್ಯ ಜಗದ್ಗುರು ಶ್ರೀ ಶ್ರೀ ಅಭಿನವ ವಿದ್ಯಾತೀರ್ಥ ಮಹಾಸನ್ನಿಧಾನಂಗಳವರು ಕೃಪೆಯಿಂದ ಸ್ಥಾಪಿಸಿ, ಶ್ರೀ ಶ್ರೀ ಗುರುವರ್ಯರ ಕರಕಮಲಸಂಜಾತರಾದ ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳವರಿಂದ ಪೋಷಿತವಾಗುತ್ತಿರುವ ಶ್ರೀ ಸುರಸರಸ್ವತೀ ಸಭೆಯು ಕಳೆದ ಮೂವತ್ತು ವರ್ಷಗಳಿಂದ ಸರಳ ಸಂಸ್ಕೃತ ಪರೀಕ್ಷೆಗಳನ್ನು ನಡೆಸುತ್ತಾ, ಆಸಕ್ತರು ಸಂಸ್ಕೃತವನ್ನು ಅಧ್ಯಯನಮಾಡುವುದಕ್ಕೆ ಅನುಕೂಲವನ್ನು ಒದಗಿಸಿದೆ. ದಿನೇ ದಿನೇ ಈ ಪರೀಕ್ಷೆಗಳು ಜನಪ್ರಿಯವಾಗುತ್ತಿರುವುದನ್ನು ಗಮನಿಸಿ, ಸಭೆಯು ನಡೆಸುತ್ತಿರುವ ಪರೀಕ್ಷೆಗಳಿಗೆ ಉಪಯುಕ್ತವಾಗುವಂತೆ, ವೈಜ್ಞಾನಿಕ ದೃಷ್ಟಿಕೋನದಿಂದ ಪಠ್ಯಪುಸ್ತಕಗಳನ್ನು ರಚಿಸಲು ಪರಮಪೂಜ್ಯ ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳವರು ನಮ್ಮ ನಾಡಿನ ಶ್ರೇಷ್ಠ ವಿದ್ವಾಂಸರಾದ ವಿದ್ವಾನ್ ಎನ್. ರಂಗನಾಥಶರ್ಮರ ಅಧ್ಯಕ್ಷತೆಯಲ್ಲಿ ಪಠ್ಯಪುಸ್ತಕ ಸಮಿತಿಯನ್ನು ರಚಿಸಿರುತ್ತಾರೆ.

ಈ ಸಮಿತಿಯವರು ಬಹು ಶ್ರಮವಹಿಸಿ, ಉತ್ಸಾಹದಿಂದ ಈ ಪುಸ್ತಕವನ್ನು ಸಿದ್ಧಮಾಡಿಕೊಟ್ಟಿದ್ದಾರೆ.

ವಿದ್ವಾನ್ ಎನ್. ರಂಗನಾಥ ಶರ್ಮಾ ಅವರಿಗೂ, ಸಮಿತಿಯ ಸದಸ್ಯರಿಗೂ, ಸಭೆಯ ಪರವಾಗಿ ಹಾರ್ದಿಕವಾದ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಗ್ರಂಥವನ್ನು ಅಂದವಾಗಿ ಮುದ್ರಣಮಾಡಿಕೊಟ್ಟಿರುವ ವಾಗರ್ಥದವರಿಗೂ ಧನ್ಯವಾದಗಳನ್ನು ಸಲ್ಲಿಸುತ್ತೇನೆ.

ಬೆಂಗಳೂರು
ಸರ್ವಜಿತ್ ಸಂವತ್ಸರದ
ಆಶ್ವಯುಜ ಶುದ್ಧ ಷಷ್ಠೀ
17-11-2007

ವಿ.ಆರ್. ಗೌರೀಶಂಕರ
ಆಡಳಿತಾಧಿಕಾರಿಗಳು
ದಕ್ಷಿಣಾಮ್ನಾಯ ಶ್ರೀಶಾರದಾಪೀಠಮ್
ಶೃಂಗೇರಿ

ವಿಷಯಾನುಕ್ರಮಣಿಕಾ

ಭಾವೇಪ್ರಯೋಗ 1

ಲಕಾರಸ್ವರೂಪ, ತಿಙ್; ಪರಸ್ಮೈಪದ - ಆತ್ಮನೇಪದ 6

ಲಿಟ್ 9

ಲುಟ್; ಲುಙ್ 12

ಲೃಙ್ ; ಆಶೀರ್ಲಿಙ್ 18

ಸತಿಸಪ್ತಮೀ 23

ನಿರ್ಧಾರಣ ಷಷ್ಠೀ-ಸಪ್ತಮೀ 25

ವಿಭಕ್ತಿ ವಿಪರ್ಯಾಯ 27

ಪ್ರಬಂಧ ರಚನೆ 36

ವಾಕ್ಯರಚನೋಪಯುಕ್ತ ಚಿಹ್ನೆಗಳು 42

ಕಾವ್ಯ-ಅಲಂಕಾರ-ಛಂದಸ್ಸು 44

॥ श्रीः ॥

अनुवादप्रदीपः-२

(अलङ्कारादि सहितः)

द्वितीयो भागः

೧. ಭಾವೇಪ್ರಯೋಗ

ಕರ್ತರಿಪ್ರಯೋಗ, ಕರ್ಮಣಿಪ್ರಯೋಗಗಳ ವಿಷಯವಾಗಿ ಹಿಂದೆ ತಿಳಿದಿದ್ದೀರಿ. ಸಂಸ್ಕೃತದಲ್ಲಿ ಭಾವೇಪ್ರಯೋಗ ಎಂಬ ಇನ್ನೊಂದು ಬಗೆಯುಂಟು. ಭಾವ ಎಂದರೆ ಧಾತ್ವರ್ಥವಾದ ಕೇವಲ ಕ್ರಿಯೆ. ಭಾವೇಪ್ರಯೋಗದಲ್ಲಿ ಧಾತುವಿನ ಮೇಲೆ ಬಂದಿರುವ ಪ್ರತ್ಯಯವು ಭಾವಾರ್ಥದಲ್ಲಿರುವುದರಿಂದ ಭಾವೇಪ್ರಯೋಗ ಎಂಬ ಹೆಸರು ಬಂದಿದೆ. ಹೀಗೆಯೇ ಕರ್ತರಿಪ್ರಯೋಗದಲ್ಲಿ ಧಾತುವಿನ ಮೇಲೆ ಪ್ರತ್ಯಯವು ಕರ್ತ್ರರ್ಥದಲ್ಲಿಯೂ ಕರ್ಮಣಿಪ್ರಯೋಗದಲ್ಲಿ ಕರ್ಮಾರ್ಥದಲ್ಲಿಯೂ ಬಂದಿರುವುದೆಂಬುದನ್ನು ಗಮನಿಸಬೇಕು.

ಭಾವೇಪ್ರಯೋಗಕ್ಕೆ ಉದಾಹರಣೆ :-

१. रामेण भूयते=ರಾಮನಿಂದ ಇರೋಣವಾಗುತ್ತದೆ. 'ರಾಮನು ಇರುತ್ತಾನೆ' ಎಂದರ್ಥ.

२. बालैः हस्यते=ಹುಡುಗರಿಂದ ನಗೋಣವಾಗುತ್ತದೆ. 'ಹುಡುಗರು ನಗುತ್ತಾರೆ' ಎಂದರ್ಥ.

ಭಾವೇಪ್ರಯೋಗದ ವಿಷಯವಾಗಿ ತಿಳಿದುಕೊಂಡಿರಬೇಕಾದ ಅಂಶಗಳು ಇವು :-

1. ಇದು ಅಕರ್ಮಕಧಾತುಗಳಿಗೆ ಮಾತ್ರ ಬರುತ್ತದೆ.

2. ಎಲ್ಲ ಧಾತುಗಳಿಗೂ, (ಪರಸ್ಮೈಪದಿಗಳಿಗೂ ಸಹ) ಈ ಪ್ರಯೋಗದಲ್ಲಿ ಆತ್ಮನೇಪದ ಬರುತ್ತದೆ.

3. ಕ್ರಿಯಾಪದವು ಕರ್ಮಣಿಪ್ರಯೋಗದ ರೂಪವನ್ನು ಪಡೆಯುತ್ತದೆ.

4. ಕರ್ತೃಪದವು ಯಾವ ಪುರುಷದಲ್ಲಿರಲಿ, ಯಾವ ವಚನದಲ್ಲಿರಲಿ, ಕ್ರಿಯಾಪದವು ಪ್ರಥಮಪುರುಷೈಕವಚನದಲ್ಲಿ ಮಾತ್ರ ಇರುತ್ತದೆ.

5. ಕರ್ತೃಪದದ ಮೇಲೆ ತೃತೀಯಾ ವಿಭಕ್ತಿ ಬರುತ್ತದೆ.

ಉದಾಹರಣೆ :-

तेन स्थीयते, ताभ्यां स्थीयते, तैः स्थीयते ।
त्वया उपविश्यते, युवाभ्यामुपविश्यते, युष्माभिरुपविश्यते ।
मया क्रीड्यते, आवाभ्यां क्रीड्यते, अस्माभिः क्रीड्यते ।

ಎಲ್ಲ ಕಾಲಗಳಲ್ಲಿಯೂ ಎಲ್ಲ ಅರ್ಥಗಳಲ್ಲಿಯೂ ಭಾವೇಪ್ರಯೋಗವನ್ನು ಮಾಡಬಹುದು. ಉದಾಹರಣೆ :-

तेन हस्यते (ವರ್ತಮಾನ), तेन अहस्यत (ಭೂತ), तेन हसिष्यते (ಭವಿಷ್ಯತ್), तेन हस्यताम् (ಆಜ್ಞಾರ್ಥ), तेन हस्येत (ವಿಧ್ಯರ್ಥ).

ಭಾವೇಪ್ರಯೋಗಗಳನ್ನು ಕರ್ತರಿಪ್ರಯೋಗಕ್ಕೆ ಪರಿವರ್ತಿಸಿದಾಗ ಯಾವ ಬದಲಾವಣೆಗಳಾಗುತ್ತವೆಯೆಂಬುದನ್ನು ಈ ಉದಾಹರಣೆಗಳಲ್ಲಿ ಗಮನಿಸಿ.

	भावेप्रयोगः	कर्तरिप्रयोगः
१.	तेन उपविश्यते	सः उपविशति
२.	ताभ्यामुपविश्यते	तौ उपविशतः
३.	तैरुपविश्यते	ते उपविशन्ति
४.	त्वया अक्रीड्यत	त्वमक्रीडः
५.	मया अलज्ज्यत	अहमलज्जे
६.	तमसा नश्यताम्	तमो नश्यतु

७. मृगैः त्रस्येत मृगास्त्रस्येयुः
८. अस्माभिः स्थास्यते वयं स्थास्यामः

ವಿ.ಸೂ. :- मया अहस्यत ಎಂಬುದನ್ನು ಕನ್ನಡದಲ್ಲಿ 'ನನ್ನಿಂದ ನಗೋಣವಾಯಿತು' ಎಂದು ಭಾಷಾಂತರಿಸಬೇಕಾಗುತ್ತದೆ. 'ನಾನು ನಕ್ಕೆನು' ಎಂದು ಅದರ ಅರ್ಥ. ಕನ್ನಡಕ್ಕೆ ಭಾವೇಪ್ರಯೋಗ ಚೆನ್ನಾಗಿ ಹೊಂದಿಕೊಳ್ಳುವುದಿಲ್ಲ. ಸಂಸ್ಕೃತದಲ್ಲಿ ಇದನ್ನು ಮಿತವಾಗಿ ಬಳಸಿದರೆ ಭಾಷಾಸೌಂದರ್ಯ ಹೆಚ್ಚುತ್ತದೆ.

ಅಕರ್ಮಕ ಧಾತುವಿನ ಮೇಲೆ क्त, तव्य, अनीय ಮುಂತಾದ ಕೃತ್ ಪ್ರತ್ಯಯಗಳು ಬಂದಾಗಲೂ ಭಾವೇಪ್ರಯೋಗವನ್ನು ಮಾಡಬಹುದು. ಉದಾಹರಣೆ- रामेण उपविष्टम्, चन्द्रापीडेन भवितव्यम्, अस्माभिः क्रीडनीयम् । ಇದನ್ನು ಕರ್ತರಿಪ್ರಯೋಗಕ್ಕೆ ಪರಿವರ್ತಿಸುವಾಗ ತಿಙಂತವನ್ನು ಬಳಸಬೇಕಾಗುತ್ತದೆ. क्त ಪ್ರತ್ಯಯವು ಭೂತಕಾಲವನ್ನು, तव्य, अनीयಗಳು ಆಜ್ಞೆ ಅಥವಾ ವಿಧಿಯನ್ನು ಸೂಚಿಸುತ್ತವೆ.

ಭಾವೇಪ್ರಯೋಗದಲ್ಲಿ ಗಣಸಂಬಂಧಿಯಾದ ಕಾರ್ಯವಿಶೇಷವೇನೂ ಇಲ್ಲ. ಆದ್ದರಿಂದ ಎಲ್ಲ ಧಾತುಗಳ ಮೇಲೂ ಸಾರ್ವಧಾತುಕದಲ್ಲಿ 'य' ಎಂಬ ವಿಕರಣ ಪ್ರತ್ಯಯವನ್ನು ಸೇರಿಸಿ ಆತ್ಮನೇಪದದ ಪ್ರಥಮಪುರುಷೈಕವಚನವನ್ನು ಉಪಯೋಗಿಸಬೇಕು. ಭಾವೇಪ್ರಯೋಗಕ್ಕೆ ಉಪಯುಕ್ತವಾದ ಕೆಲವು ಅಕರ್ಮಕ ಧಾತುಗಳನ್ನು ಇಲ್ಲಿ ಕೊಟ್ಟಿದೆ. 'य' ವಿಕರಣವನ್ನು ಸೇರಿಸುವಾಗ ಆಗುವ ರೂಪಭೇದವನ್ನು ಕಂಸದಲ್ಲಿ ಬರೆದಿದೆ.

भू=ಇರು, ಆಗು | रुह्=ಬೆಳೆ
अस् (भू)=ಇರು, ಆಗು | क्षि (क्षी)=ಕ್ಷಯಿಸು
वृत्=ಇರು | नश्=ನಾಶವಾಗು
स्था (स्थी)=ನಿಲ್ಲು, ಇರು | त्रस्, भी=ಹೆದರು
वृध्=ಹೆಚ್ಚಾಗು, ವೃದ್ಧಿಯಾಗು | जीव्=ಬದುಕು

श्वस्=ಉಸಿರಾಡು
मृ (म्रि)=ಸಾಯು
लस्ज् (लज्)=ನಾಚಿಕೆಪಡು
जागृ (जागर्)=ಎಚ್ಚರಾಗು, ಜಾಗರಣೆಮಾಡು
स्वप् (सुप्), नि+द्रा=ನಿದ್ರಿಸು
शी (शय्)=ಮಲಗು
राज्, चकास्, दीप्=ಬೆಳಗು, ಪ್ರಕಾಶಿಸು
वेप्, कम्प्=ನಡುಗು, ಅಲ್ಲಾಡು
चल्=ಚಲಿಸು
चर्=ಸಂಚರಿಸು
द्रु (द्रू)=ಕರಗು
तुष्, नन्द्, मुद्=ಸಂತೋಷಿಸು
क्लिश्=ಕಷ್ಟಪಡು
यत्=ಯತ್ನಿಸು
खिद्=ಖೇದಪಡು
जि (जी)=ಜಯಶೀಲನಾಗು, ಉತ್ಕರ್ಷದಿಂದಿರು (ಗೆಲ್ಲು ಎಂಬ ಅರ್ಥದಲ್ಲಿ ಇದು ಸಕರ್ಮಕ)
वि+रम्=ವಿರಮಿಸು, ಸುಮ್ಮನಾಗು
नृत्=ನರ್ತಿಸು
स्ना=ಸ್ನಾನಮಾಡು
वस् (उष्)=ವಾಸಮಾಡು

अभ्यासः १

कर्णाटकभाषया परिवर्तयत-

१. किमर्थं भवद्भिस्तूष्णीं स्थीयते ? २. ननु च विदुषां संनिधावस्माभिस्तूष्णीकैरेव भूयते । ३. यदा सूर्येण प्रकाश्यते, तदा नश्यते तमसा, जागर्यते च जनैः । ४. अस्मिन् विषये वृथा युष्माभिः क्लिश्यते । ५. दुस्तर्कात् सुविरम्यतां, विधिवशात् प्राप्तेन संतुष्यताम् । ६. परीक्षा संनिहिता, युष्माभिरधीयानैर्भूयेत । ७. कृष्णेन कालियस्य फणासु नर्तितम्; भीतं गोपैः; विषण्णं नन्देन । ८. भेतव्यं पापात्, लज्जितव्यं दुस्तर्कात् । ९. क्रीड्यतां नाम सायङ्काले बालकैः । १०. प्रयत्यतां यथाशक्ति, भविष्यते फलेन ॥

अभ्यासः २

संस्कृतभाषया परिवर्तयत-

(ಪರಿವರ್ತನೆಗೆ ನೆರವಾಗಲೆಂದು ಭಾವೇಪ್ರಯೋಗದ ಶೈಲಿಯಲ್ಲಿ ಕನ್ನಡ ವಾಕ್ಯಗಳನ್ನು ಬರೆದಿದೆ.)

1. ನಿಮ್ಮಿಂದ ನಗೋಣವಾಗುತ್ತದೆ. 2. ಈ ರಾತ್ರಿ ಅವರಿಬ್ಬರಿಂದ ಇರೋಣವಾಗುತ್ತದೆ. 3. ಕಲ್ಲಿನಮೇಲೆ ಸೀತಾರಾಮರಿಂದ ಕುಳಿತು ಕೊಳ್ಳೋಣ ವಾಯಿತು. 4. ಹುಲಿಯ ಆರ್ಭಟವನ್ನು ಕೇಳಿ ಅವನಿಂದ ನಡುಗೋಣವಾಯಿತು. 5. ಗುರುಗಳ ಎದುರಿಗೆ ಅವಳಿಂದ ನಾಚಿಕೆ ಗೊಳ್ಳಲ್ಪಡುವುದು. 6. ಭಾರತ ರಾಷ್ಟ್ರದಿಂದ ಜಯಶೀಲವಾಗಿ ಇರೋಣವಾಗಲಿ. 7. ಈ ದಿನ ನನ್ನಿಂದ ಹೊಳೆಯಲ್ಲಿ ಸ್ನಾನವಾಗಬೇಕು. (ಕೃದಂತವನ್ನು ಉಪಯೋಗಿಸಿರಿ). 8. ರಂಗ ಸ್ಥಳದಲ್ಲಿ ನಟಿಯರಿಂದ ನರ್ತಿಸಲ್ಪಡಲಿ. 9. ನಿಮ್ಮಿಂದ ಕುಳಿತುಕೊಳ್ಳೋಣವಾಗಲಿ. 10. ಔಷಧವನ್ನು ಸಿಂಪಡಿಸಿದಾಗ, ಸೊಳ್ಳೆಗಳಿಂದ ಸಾಯೋಣವಾಯಿತು.

अभ्यासः ३

संस्कृतभाषया परिवर्तयत-

(ಈ ವಾಕ್ಯಗಳು ಕರ್ತರಿಪ್ರಯೋಗದಲ್ಲಿವೆ. ಸಂಸ್ಕೃತದಲ್ಲಿ ಭಾವೇಪ್ರಯೋಗಕ್ಕೆ ಪರಿವರ್ತಿಸಬೇಕು).

1. ನೀವು ಹೊರಡಿರಿ. 2. ಅವರು ಪ್ರಯತ್ನಿಸಿದರು. 3. ಯಾವ ಕಾರ್ಯವೂ ಫಲಿಸಲಿಲ್ಲ. (ಕೃದಂತವನ್ನು ಉಪಯೋಗಿಸಬೇಕು.) 4. ಎಲ್ಲರೂ ನಗುತ್ತಾರೆ. 5. ಚಂದ್ರನು ಪ್ರಕಾಶಿಸುತ್ತಾನೆ. 6. ತುಪ್ಪವು ಕರಗುತ್ತದೆ. 7. ದುಷ್ಕಾರ್ಯವನ್ನು ನಿಲ್ಲಿಸು.[1] 8. ಸುಮ್ಮನೆ ಕುಳಿತುಕೊಳ್ಳಬೇಕು. 9. ನೀವು ಸ್ನಾನಮಾಡಿದಿರಿ. 10. ಸೀತೆಯು ನಾಚಿಕೆಪಡುತ್ತಾಳೆ. 11. ಶತ್ರುಗಳು ಹೆಚ್ಚುವರು.[2]

---

1. विरम्यताम् 2. वृध्यते

೨. ಲಕಾರಸ್ವರೂಪ. ತಿಙ್; ಪರಸ್ಮೈಪದ-ಆತ್ಮನೇಪದ

ಕ್ರಿಯಾವಾಚಕವಾದ भू, एध् ಮೊದಲಾದ ಶಬ್ದಸ್ವರೂಪಕ್ಕೆ ಧಾತುವೆಂದು ಹೆಸರು. ಧಾತುವಿನ ಮೇಲೆ ಬೇರೆ ಬೇರೆ ಕಾಲವನ್ನೂ, ಅರ್ಥವನ್ನೂ ಸೂಚಿಸುವಾಗ ಲಟ್, ಲಿಟ್, ಲುಟ್, ಲೃಟ್, ಲೇಟ್, ಲೋಟ್, ಲಙ್, ಲಿಙ್, ಲುಙ್, ಲೃಙ್, - ಎಂಬ ಹತ್ತು ಬಗೆಯ ಪ್ರತ್ಯಯಗಳು ಹತ್ತುತ್ತವೆ. ಇವುಗಳಲ್ಲಿ 'ಲ್' ಎಂಬ ಅಕ್ಷರವು ಸಮಾನವಾಗಿರುವುದರಿಂದ ಇವುಗಳಿಗೆ ಲಕಾರಗಳೆಂದು ಹೆಸರು ಬಂದಿದೆ. ಈ ಲಕಾರಗಳಲ್ಲಿ ಲೇಟ್ ಎಂಬುದಕ್ಕೆ ವೇದದಲ್ಲಿ ಮಾತ್ರ ಪ್ರಯೋಗವಿದೆ. ಲಿಙ್ ಎಂಬುದು ವಿಧಿಲಿಙ್, ಆಶೀರ್ಲಿಙ್ ಎಂದು ಎರಡು ವಿಧ, ಆದ್ದರಿಂದ 'ಲೇಟ್' ಎಂಬುದನ್ನು ಬಿಟ್ಟ ಲೋಕದಲ್ಲಿ ದಶ ಲಕಾರಗಳಿವೆ ಎನ್ನಬಹುದು. ಈ ಎಲ್ಲ ಲಕಾರಗಳಿಗೂ ತಿಙ್ ಎಂಬ ಆದೇಶ ಬರುತ್ತದೆ. ತಿಙ್ ಯಾವುದರ ಅಂತದಲ್ಲಿದೆಯೋ ಅದು ತಿಙಂತ. ಇದೇ ಕ್ರಿಯಾಪದ.

ತಿಙ್ ಪ್ರತ್ಯಯಗಳು ಒಟ್ಟು ಹದಿನೆಂಟು. ಇವು ಒಂಬತ್ತು-ಒಂಬತ್ತು ಆಗಿ ಎರಡು ವರ್ಗಗಳಾಗುತ್ತವೆ. ಮೊದಲನೆಯ ವರ್ಗಕ್ಕೆ ಪರಸ್ಮೈಪದವೆಂದೂ ಎರಡನೆಯ ವರ್ಗಕ್ಕೆ ಆತ್ಮನೇಪದವೆಂದೂ ಸಂಜ್ಞೆ. ಒಂದೊಂದು ವರ್ಗವೂ ಪ್ರಥಮಪುರುಷ, ಮಧ್ಯಮಪುರುಷ, ಉತ್ತಮಪುರುಷಗಳೆಂದೂ, ಏಕವಚನ, ದ್ವಿವಚನ, ಬಹುವಚನಗಳೆಂದೂ ವಿಭಕ್ತವಾಗುತ್ತದೆ. ಹೇಗೆಂದರೆ,

	ए.व.	द्वि.व.	ब.व.	
प्र.पु.	तिप्	तस्	झि	परस्मैपदम्
म.पु.	सिप्	थस्	थ	
उ.पु.	मिप्	वस्	मस्	
प्र.पु.	त	आताम्	झ	आत्मनेपदम्
म.पु.	थास्	आथाम्	ध्वम्	
उ.पु.	इट्	वहि	महिङ्	

ಇವುಗಳಲ್ಲಿ ಮೊದಲನೆಯ 'ति' ಎಂಬುದರೊಡನೆ ಕಡೆಯ 'ङ्' ಎಂಬುದನ್ನು ಸೇರಿಸಿ तिङ् ಎಂದು ಪ್ರತ್ಯಾಹಾರ ಮಾಡಲಾಗಿದೆ. ಆದ್ದರಿಂದ तिङ् ಎಂದರೆ ಈ ಹದಿನೆಂಟು ಪ್ರತ್ಯಯಗಳೆಂದು ತಿಳಿಯಬೇಕು. ಇವು ಬೇರೆ ಬೇರೆ ಲಕಾರದಲ್ಲಿ ನಾನಾರೂಪಾಂತರಗಳನ್ನು ಪಡೆಯುತ್ತವೆ. ಆದರೂ ತಿಙ್ ಎಂಬ ಹೆಸರೂ, ಲಟ್, ಲಿಟ್ ಮುಂತಾದ ಹೆಸರೂ ಇದ್ದೇ ಇರುತ್ತವೆ. ಆದ್ದರಿಂದ ಕ್ರಿಯಾಪದಕ್ಕೆ ತಿಙಂತವೆಂದು ವ್ಯವಹಾರ ಉಂಟು. ಉದಾಹರಣೆ-

अभवत् (लङ्)	=तिप्	ಪ್ರತ್ಯಯವು त् ಆಗಿದೆ.
बभूव (लिट्)	=	ಪ್ರತ್ಯಯವು अ ಆಗಿದೆ.
वर्धते (लट्)	=त	ಪ್ರತ್ಯಯವು ते ಆಗಿದೆ.
ववृधे (लिट्)	=	ಪ್ರತ್ಯಯವು ए ಆಗಿದೆ.

ಕೆಲವು ಧಾತುಗಳಿಗೆ ಪರಸ್ಮೈಪದಗಳು ಮಾತ್ರ ಹತ್ತುತ್ತವೆ. ಈ ಧಾತುಗಳಿಗೆ ಪರಸ್ಮೈಪದಿ ಎಂದು ಹೆಸರು. ಕೆಲವು ಧಾತುಗಳಿಗೆ ಆತ್ಮನೇಪದಗಳು ಮಾತ್ರ ಹತ್ತುತ್ತವೆ. ಅವುಗಳಿಗೆ ಆತ್ಮನೇಪದಿಗಳೆಂದು ಹೆಸರು. ಕೆಲವಕ್ಕೆ ಉಭಯಪದಗಳೂ ಬರುತ್ತವೆ. ಆ ಧಾತುಗಳಿಗೆ ಉಭಯಪದಿಗಳೆಂದು ಹೆಸರು, ಪರಸ್ಮೈಪದ, ಆತ್ಮನೇಪದ ಎಂಬುದು ತಿಙ್ಪ್ರತ್ಯಯ ವಿಶೇಷಗಳಿಗೆ ವ್ಯಾಕರಣ ಶಾಸ್ತ್ರದ ಸಂಜ್ಞಾವಿಶೇಷ. ಸಾಮಾನ್ಯವಾಗಿ ಇವುಗಳಿಗೆ ಅರ್ಥದಲ್ಲಿ ಭೇದವಿಲ್ಲ. ಆದರೂ ಉಭಯಪದಿಗಳಲ್ಲಿ ಒಂದು ಸೂಕ್ಷ್ಮವಾದ ಅರ್ಥಭೇದ ಉಂಟು. ಕ್ರಿಯಾಫಲವು ಆತ್ಮಗಾಮಿಯಾದಾಗ ಇವುಗಳಿಗೆ ಆತ್ಮನೇಪದ ಬರುತ್ತದೆ. ಪರಗಾಮಿಯಾದಾಗ ಪರಸ್ಮೈಪದ ಬರುತ್ತದೆ. ಉದಾಹರಣೆ- पच् ಧಾತು ಉಭಯಪದಿ.

१. छात्रः पचते=ವಿದ್ಯಾರ್ಥಿ ಅಡಿಗೆಮಾಡಿಕೊಳ್ಳುತ್ತಾನೆ. ಅಡಿಗೆ ಯಿಂದಾಗುವ ತೃಪ್ತಿ ಎಂಬ ಫಲ ತನಗಾಗಿ.

२. सूदः पचति=ಅಡಿಗೆಯವನು ಅಡಿಗೆಮಾಡುತ್ತಾನೆ. ತೃಪ್ತಿ ಎಂಬ ಫಲ ಪರರಿಗಾಗಿ.

ಹೀಗೆಯೇ ಉಪಸರ್ಗವಶದಿಂದಲೂ ಅರ್ಥಭೇದದಿಂದಲೂ ಆತ್ಮನೇಪದ, ಪರಸ್ಮೈಪದಗಳು ವ್ಯತ್ಯಸ್ತವಾಗುವುದುಂಟು. ಇದೆಲ್ಲವನ್ನು ತಿಳಿಯಲು ಸುಲಭವಾದ

ಉಪಾಯವೇನೂ ಇಲ್ಲ. ವ್ಯಾಕರಣಶಾಸ್ತ್ರದಿಂದಲೂ ವಿದ್ವಾಂಸರ ಪ್ರಯೋಗದಿಂದಲೂ ತಿಳಿದುಕೊಳ್ಳಬೇಕು.

ದಶ ಲಕಾರಗಳು ಸಾಮಾನ್ಯವಾಗಿ ಕೆಳಗೆಕಂಡಂತೆ ಕಾಲವನ್ನೂ, ಅರ್ಥವನ್ನೂ ಸೂಚಿಸುವಾಗ ಬರುತ್ತವೆ. ಹಿಂದೆ ಹೇಳಿದ ನಿಯಮಾನುಸಾರವಾಗಿ ಇವುಗಳಿಗೆ ಕರ್ತರಿಪ್ರಯೋಗ, ಕರ್ಮಣಿಪ್ರಯೋಗ ಮತ್ತು ಭಾವೇಪ್ರಯೋಗಗಳು ಉಂಟು.

लट् =ವರ್ತಮಾನಕಾಲ

(लेट् =ವೇದದಲ್ಲಿ)

लुङ्, लङ्, लिट् } ಭೂತಕಾಲ

लुट्, लृट् } ಭವಿಷ್ಯತ್ಕಾಲ

लृङ् =ಕ್ರಿಯಾನಿಷ್ಪತ್ತಿ ಇಲ್ಲದಿದ್ದಾಗ) ಭೂತ-ಭವಿಷ್ಯತ್ಕಾಲ

लोट्, विधिलिङ् } ಆಜ್ಞೆ (ವಿಧಿ), ಪ್ರೇರಣೆ, ಪ್ರಾರ್ಥನೆ, ಅನುಮತಿ ಇತ್ಯಾದಿ

आशीर्लिङ् = ಆಶೀರರ್ಥ

ಕಾಲವಿಚಾರ

ವರ್ತಮಾನಕಾಲ, ಭೂತಕಾಲ, ಭವಿಷ್ಯತ್ಕಾಲ ಎಂದು ಕಾಲವು ಮೂರು ವಿಧ. ಕ್ರಿಯೆ ಪ್ರಾರಂಭವಾಗಿದ್ದು ಇನ್ನೂ ಮುಗಿಯದೇ ಇದ್ದಾಗ ಅದರ ಕಾಲ ವರ್ತಮಾನ. ಕ್ರಿಯೆ ಮುಗಿದುಹೋಗಿದ್ದರೆ ಭೂತಕಾಲ. ಕ್ರಿಯೆ ಇನ್ನೂ ಆರಂಭವೇ ಆಗದಿದ್ದಾಗ ಭವಿಷ್ಯತ್ಕಾಲ. ಭೂತಕಾಲದಲ್ಲಿ ಸಾಮಾನ್ಯಭೂತ, ಅನದ್ಯತನಭೂತ, ಪರೋಕ್ಷಾನದ್ಯತಭೂತ ಎಂದು ಮೂರು ಬಗೆ. ಕಳೆದ ರಾತ್ರಿ

12 ಘಂಟೆಯಿಂದ ಬರುವ ರಾತ್ರಿ 12 ಘಂಟೆಯವರೆಗಿನ ಕಾಲಕ್ಕೆ ಅದ್ಯತನವೆಂದು ಹೆಸರು. ಅದ್ಯತನವಲ್ಲದ್ದು ಅನದ್ಯತನ. ನಮಗೆ ಸಾಕ್ಷಾತ್ತಾಗಿ ಗೋಚರಿಸದೆ ಇರುವ ಕ್ರಿಯೆ ಪರೋಕ್ಷವೆನಿಸುತ್ತದೆ. ಅನದ್ಯತಭೂತದಲ್ಲಿ ಲಙ್, ಪರೋಕ್ಷಾ-ನದ್ಯತನಭೂತದಲ್ಲಿ ಲಿಟ್ ಬರುತ್ತವೆ. ಪರೋಕ್ಷವೆಂದಾಗಲಿ ಅನದ್ಯತವೆಂದಾಗಲಿ ಎಣಿಸದೆ 'ಮುಗಿದುಹೋದ ಕ್ರಿಯೆ' ಎಂದು ಸಾಮಾನ್ಯವಾಗಿ ವಿವಕ್ಷೆ ಮಾಡಿದಾಗ ಅದರ ಕಾಲ ಸಾಮಾನ್ಯಭೂತವೆನಿಸುತ್ತದೆ. ಈ ಭೂತ ಸಾಮಾನ್ಯದಲ್ಲಿ ಲುಙ್ ಬರುತ್ತದೆ.

ಇಂದಿನ ರಾತ್ರಿ 12 ಘಂಟೆಯ ಮುಂದಿನ ಕಾಲ ಅನದ್ಯತನ ಭವಿಷ್ಯತ್. ಅದರಲ್ಲಿ ಲುಟ್ ಬರುತ್ತದೆ. ಭವಿಷ್ಯತ್ ಸಾಮಾನ್ಯದಲ್ಲಿ ಲೃಟ್. ಲೃಙ್ ಲಕಾರದ ವಿಷಯವನ್ನು ಮುಂದೆ ತಿಳಿಸಲಾಗುವುದು ಈ ಶ್ಲೋಕವನ್ನು ಕಲಿಯಿರಿ :-

लट् वर्तमाने लेट् वेदे भूते लुङ्लङ्लिटस्तथा ।
विध्याशिषोस्तु लिङ्लोटौ लृङ्लृटौ लुट् भविष्यति ॥

೩. ಲಿಟ್

ಕ್ರಿಯೆಯು ಪರೋಕ್ಷಾನದ್ಯತಭೂತಕಾಲದಲ್ಲಿದ್ದಾಗ ಧಾತುವಿನ ಮೇಲೆ ಲಿಟ್ ಬರುತ್ತದೆ. ಉದಾಹರಣೆ-

रामो रावणं जघान=ರಾಮನು ರಾವಣನನ್ನು ಸಂಹರಿಸಿದನು. ಈ ಸಂಹಾರಕ್ರಿಯೆ ನಮಗೆ ಪರೋಕ್ಷವಾದದ್ದು. ವಾಕ್ಯವನ್ನು ಪ್ರಯೋಗ ಮಾಡತಕ್ಕವರಿಗೆ ಕ್ರಿಯೆ ಪರೋಕ್ಷವಾಗಿರಬೇಕು. ನಿದ್ರೆಯಲ್ಲಿ, ಹುಚ್ಚು ಹಿಡಿದಾಗ, ಮದವೇರಿದಾಗ, ಮನಸ್ಸು ಬೇರೆ ಕಡೆ ತಿರುಗಿದ್ದಾಗ ತಾನು ಮಾಡುವ ಕ್ರಿಯೆಯೂ ಪರೋಕ್ಷವಾಗುವುದರಿಂದ ಉತ್ತಮಪುರುಷದಲ್ಲಿಯ ಪ್ರಯೋಗ ಬರುತ್ತದೆ. ಉದಾಹರಣೆ-सुप्ताहं किल विललाप='ನಾನು ನಿದ್ರಿಸುತ್ತಿದ್ದಾಗ ಅತ್ತೆನಂತೆ' ಎಂದರ್ಥ.

ಲಿಟ್ ಸ್ಥಾನದಲ್ಲಿ ತಿಙ್ ಆದೇಶವಾಗಿ ಅದಕ್ಕೆ ಪುನಃ ಬೇರೆ ಬೇರೆ ಆದೇಶಗಳು ಬರುತ್ತವೆ.

लिट्

परस्मैपदप्रत्ययाः				आत्मनेपदप्रत्ययाः		
प्र.	अ (औ)	अतुस्	उस्	ए	आते	इरे
म.	थ	अथुस्	अ	से (षे)	आथे	ध्वे (ढ्वे)
उ.	अ (औ)	व	म	ए	वहे	महे

ವಿ.ಸೂ. : ಕೆಲವು ಧಾತುಗಳ ಮುಂದಿರುವ ವ್ಯಂಜನಾದಿಯಾದ ಪ್ರತ್ಯಯಗಳಿಗೆ इट् ಎಂಬ ಆಗಮವು ಪ್ರತ್ಯಯದ ಹಿಂದೆ ಬರುತ್ತದೆ. ಈ ಧಾತುಗಳಿಗೆ सट् ಎಂದು ಹೆಸರು. ಕೆಲವಕ್ಕೆ ಬರುವುದಿಲ್ಲ. ಆ ಧಾತುಗಳಿಗೆ अनिट् ಎಂದು ಹೆಸರು. ಇಡಾಗಮವು ಬಂದಾಗ व, म ಮೊದಲಾದವು इव, इम ಇತ್ಯಾದಿ ರೂಪಗಳನ್ನು ಪಡೆಯುತ್ತವೆ.

लिट्

	परस्मैपदम्			आत्मनेपदम्		
	भू			वृध्		
प्र.	बभूव	बभूवतुः	बभूवुः	ववृधे	ववृधाते	ववृधिरे
म.	बभूविथ	बभूवथुः	बभूव	ववृधिषे	ववृधाथे	ववृधिध्वे
उ.	बभूव	बभूविव	बभूविम	ववृधे	ववृधिवहे	ववृधिमहे
	पच्			पच्		
प्र.	पपाच	पेचतुः	पेचुः	पेचे	पेचाते	पेचिरे
म.	पेचिथ पपक्थ	पेचथुः	पेच	पेचिषे	पेचाथे	पेचिध्वे
उ.	पपाच पपच	पेचिव	पेचिम	पेचे	पेचिवहे	पेचिमहे

	कृ			कृ		
प्र.	चकार	चक्रतुः	चक्रुः	चक्रे	चक्राते	चक्रिरे
म.	चकर्थ	चक्रथुः	चक्र	चकृषे	चक्राथे	चकृढ्वे
उ.	चकार, चकर	चकृव	चकृम	चक्रे	चकृवहे	चकृमहे

या

प्र.	ययौ	ययतुः	ययुः
म.	ययिथ, ययाथ	ययथुः	यय
उ.	ययौ	ययिव	ययिम

अभ्यासः ४

कर्णाटकभाषया परिवर्तयत-

१. पुरा दशरथो नाम राजा बभूव, यस्य चत्वारः पुत्रा जज्ञिरे। २. स भगवान् नारायणो वासुदेवात् देवक्यां श्रीकृष्णनाम्ना अवततार । ३. स च चाणूरं पराजिग्ये, कंसञ्च जघान । ४. तेन धूर्जगतो गुर्वी सचिवेषु निचिक्षिपे । ५. तौ दंपती वसिष्ठस्य गुरोर्जग्मतुराश्रमम् । ६. कुम्भकर्णेन विकटं जहसे रणमूर्धनि । ७. श्रुतं मया यत्त्वं वाराणसीं ययाथ । ८. पेचिध्वे छात्रनिलये यूयमित्यब्रुवन्नमी । ९. बहु जगद पुरस्तात् तस्य मत्ता किलाहम् । १०. शशासुराङ्ग्ला अस्माकं राष्ट्रं सार्धशतं समाः ।

११. नेदे[1] मृदङ्गैस्त्रिदिवे ननृते चाप्सरोगणैः । १२. श्रीरामेण प्रजाः सर्वाश्चक्रिरे धर्मतत्पराः ।

अभ्यासः ५

संस्कृतभाषया परिवर्तयत (क्रियापदानि लिडन्तानि स्युः)-

1. ಹನುಮಂತನು ಲಂಕೆಯನ್ನು ಪ್ರವೇಶಿಸಿದನು. 2. ಅವನಿಂದ ಸೀತೆ ನೋಡಲ್ಪಟ್ಟಳು. 3. ಚಾಣೂರ ಮುಷ್ಟಿಕ ಎಂಬ ಇಬ್ಬರು ಜಟ್ಟಿಗಳಿದ್ದರು. 4. ಅವರಿಬ್ಬರಿಂದ ಶ್ರೀಕೃಷ್ಣಬಲರಾಮರನ್ನು ಗೆಲ್ಲಲು ಯತ್ನಿಸೋಣವಾಯಿತು. 5. ಬಾಲಕರು ಪಾಠಶಾಲೆಗೆ ಹೋಗಲಿಲ್ಲ. 6. ನಾನು ನಿದ್ರೆಯಲ್ಲಿ ಹಲುಬಿದೆನಂತೆ. 7. ಶುಕಸಾರಣರು ವಾನರಸೇನೆಯನ್ನು ನೋಡಿದರು. 8. ಅಡಿಗೆಯವನು ಅತಿಥಿಗಳಿಗಾಗಿ ಅಡಿಗೆಮಾಡಿದನು. 9. ಆಂಗ್ಲರು ಭಾರತ ದೇಶವನ್ನು ಏಕೆ ತ್ಯಜಿಸಿದರು ? 10. ಕಾಳಿದಾಸನು ರಘುವಂಶವೆಂಬ ಕಾವ್ಯವನ್ನು ರಚಿಸಿದನು. 11. ವಾಮನಜಯಾದಿತ್ಯರು ಕಾಶಿಕೆಯೆಂಬ ಗ್ರಂಥವನ್ನು ಬರೆದರು. 12. ಅಕ್ಕಸಾಲಿಗರು ಚಿನ್ನದಿಂದ ಒಡವೆಗಳನ್ನು ಮಾಡಿದರು.

೪. ಲುಟ್; ಲುಙ್

ಲುಟ್

ಅನದ್ಯತಭವಿಷ್ಯತ್ಕಾಲದಲ್ಲಿ ಧಾತುವಿನ ಮೇಲೆ ಲುಟ್ ಬರುತ್ತದೆ. ಇಂದಿನ ರಾತ್ರಿ 12 ಘಂಟೆಗೆ ಮುಂದೆ ಅನದ್ಯತನಭವಿಷ್ಯತ್ಕಾಲ. ಲುಟ್ಟಿನ ಸ್ಥಾನದಲ್ಲಿ ಪ್ರಥಮಪುರುಷದ ಮೂರು ವಚನಗಳಿಗೆ ಕ್ರಮವಾಗಿ आ, रौ, रस् ಎಂಬ ಆದೇಶಗಳು ಬರುತ್ತವೆ. ಉಳಿದ ಎಲ್ಲ ಪ್ರತ್ಯಯಗಳು ವರ್ತಮಾನ ಕಾಲ (लट्)ದಲ್ಲಿರುವಂತೆ ಇರುತ್ತವೆ. ಲುಟ್ ಪರವಾದಾಗ ಎಲ್ಲ ಗಣದ ಧಾತುಗಳ ಮುಂದೆ तास् ಎಂಬ ವಿಕರಣ ಪ್ರತ್ಯಯ ಹತ್ತುತ್ತದೆ. ಅದಕ್ಕೆ ಕೆಲವು

---

1. ಶಬ್ದ ಮಾಡೋಣವಾಯಿತು.

ಲೋಪಾದೇಶಗಳು ಬರುವುದರಿಂದ, तास् ವಿಕರಣದೊಡನೆ ಲುಟ್ ಪ್ರತ್ಯಯಗಳು ಸೇರಿ ಕೆಳಗೆ ಕಂಡಂತೆ ಆಗುತ್ತವೆ.

	परस्मैपदम्			आत्मनेपदम्		
प्र.	ता	तारौ	तारस्	ता	तारौ	तारस्
म.	तासि	तास्थस्	तास्थ	तासे	तासाथे	ताध्वे
उ.	तास्मि	तास्वस्	तास्मस्	ताहे	तास्वहे	तास्महे

ಸೇಟ್ ಧಾತುಗಳಿಗೆ ಇವುಗಳ ಹಿಂದೆ ಇಡಾಗಮ ಬರುತ್ತದೆ.

लुट्

परस्मैपदम्

भू

प्र.	भविता	भवितारौ	भवितारः
म.	भवितासि	भवितास्थः	भवितास्थ
उ.	भवितास्मि	भवितास्वः	भवितास्मः

आत्मनेपदम्

वृधु

प्र.	वर्धिता	वर्धितारौ	वर्धितारः
म.	वर्धितासे	वर्धितासाथे	वर्धिताध्वे
उ.	वर्धिताहे	वर्धितास्वहे	वर्धितास्महे

कृ

प्र.	कर्ता	कर्तारौ	कर्तारः
म.	कर्तासि	कर्तास्थः	कर्तास्थ
उ.	कर्तास्मि	कर्तास्वः	कर्तास्मः

लभ्

प्र.	लब्धा	लब्धारौ	लब्धारः
म.	लब्धासे	लब्धासाथे	लब्धाध्वे
उ.	लब्धाहे	लब्धास्वहे	लब्धास्महे

ಇದರ ಪ್ರಥಮಪುರುಷೈಕವಚನದ ರೂಪವನ್ನು ತಿಳಿದುಕೊಂಡರೆ ಉಳಿದ ರೂಪಗಳನ್ನು ಊಹಿಸುವುದು ಸುಲಭ. ಅಂತಹ ಕೆಲವು ರೂಪಗಳನ್ನು ಕೆಳಗೆ ಬರೆದಿದೆ.

पठ्=पठिता	चुर्=चोरयिता	नम=नन्ता
गम्=गन्ता	उप+विश्=उपवेष्टा	यज्=यष्टा
पच्=पक्ता	दा=दाता	दृश्=द्रष्टा
वद्=वदिता	अस्=भविता	कृ=कर्ता
लिख्=लेखिता	अद् =अत्ता	ब्रू-वक्ता

ಲುಙ್

ಭೂತಸಾಮಾನ್ಯದಲ್ಲಿ ಲುಙ್ ಬರುತ್ತದೆ. ಅದಕ್ಕೆ ಬರುವ ತಿಙ್ ಆದೇಶಗಳು ಉಭಯಪದಗಳಲ್ಲಿಯೂ ಅನದ್ಯತನಭೂತ (लङ्) ದಂತೆ ಇರುತ್ತವೆ. ಆದರೆ ವಿಕರಣ ಪ್ರತ್ಯಯಗಳು ಬೇರೆ ಬೇರೆ ಇರುವುದರಿಂದ ನಾನಾರೂಪಗಳಾಗುತ್ತವೆ. ಮಾದರಿಗಾಗಿ ಕೆಲವು ಧಾತುಗಳ ಲುಙ್ ರೂಪಗಳನ್ನು ಇಲ್ಲಿ ಬರೆದಿದೆ.

भू

प्र.	अभूत्	अभूताम्	अभूवन्
म.	अभूः	अभूतम्	अभूत
उ.	अभूवम्	अभूव	अभूम

गम्

प्र.	अगमत्	अगमताम्	अगमन्
म.	अगमः	अगमतम्	अगमत
उ.	अगमम्	अगमाव	अगमाम

या

प्र.	अयासीत्	अयासिष्टाम्	अयासिषुः
म.	अयासीः	अयासिष्टम्	अयासिष्ट
उ.	अयासिषम्	अयासिष्व	अयासिष्म

कृ

प्र.	अकार्षीत्	अकार्ष्टाम्	अकार्षुः
म.	अकार्षीः	अकार्ष्टम्	अकार्ष्ट
उ.	अकार्षम्	अकार्ष्व	अकार्ष्म

चुर्

प्र.	अचूचुरत्	अचूचुरताम्	अचूचुरन्
म.	अचूचुरः	अचूचुरतम्	अचूचुरत
उ.	अचूचुरम्	अचूचुराव	अचूचुराम

गण्

प्र.	अजीगणत्	अजीगणताम्	अजीगणन्
म.	अजीगणः	अजीगणतम्	अजीगणत
उ.	अजीगणम्	अजीगणाव	अजीगणाम

आत्मनेपदम्

प्र.	अकृत	अकृषाताम्	अकृषत
म.	अकृथाः	अकृषाथाम्	अकृढ्वम्
उ.	अकृषि	अकृष्वहि	अकृष्महि

वृधु

प्र.	अवर्धिष्ट	अवर्धिषाताम्	अवर्धिषत
म.	अवर्धिष्ठाः	अवर्धिषाथाम्	अवर्धिध्वम्
उ.	अवर्धिषि	अवर्धिष्वहि	अवर्धिष्महि

ಕರ್ಮಣಿ ಮತ್ತು ಭಾವೇಪ್ರಯೋಗದಲ್ಲಿ ಪ್ರಥಮ ಪುರುಷೈಕವಚನದ ಲುಙ್‌ರೂಪಗಳನ್ನು ನೀವು ತಿಳಿದುಕೊಂಡಿದ್ದರೆ ಸಾಕು. ಅವು ಈ ಪ್ರಕಾರ ಇರುತ್ತವೆ.

पठ्=अपाठि	लिख्=अलेखि	पच्=अपाचि
हस्=अहासि	लस्ज्=अलज्जि	कृ=अकारि
दा=अदायि	अद्=अवादि	भण्=अभाणि
दृश्=अदर्शि-ಇತ್ಯಾದಿ		

अभ्यासः ६

कर्णाटकभाषया परिवर्तयत-

१. नवरात्रोत्सवे वयं शृङ्गेरीं यातास्मः । २. भवान् खलु क्रीडास्पर्धायां पारितोषिकं लब्धा । ३. आषाडे झञ्झावातेन सह महावृष्टिर्भविता । ४. देहल्यां नैदाघं तापं कथं सोढासे ? ५. इमे संस्कृतस्य प्राशस्त्यमधिकृत्य भणितारः । ६. इमाः स्त्रियः श्वः प्रातर्नदीं गन्तारः, तत्र स्नातारश्च । ७. इदं सर्वं वयं पूर्वमेव अवोचाम । ८. सूदाः सम्यगपाक्षुः यद् भुक्त्वा सर्वेऽप्यानन्दिषुः । ९. भवद्भिः सुष्ठु अभाषि, यच्छ्रुत्वा सभ्यैरतोषि । १०. गुरोराज्ञां नाकृथाः, न च पाठमपाठीः, अपि तु ग्रामान्तरमयासीः । ११. अमूः कुमार्यः अनाथालये अवर्धिषत, यत्र तासां विद्यार्जनं सम्यगभूत् । १२. पाण्डवाः द्वादश वर्षाणि वनेऽवात्सुः ।

अभ्यासः ७

संस्कृतभाषया परिवर्तयत (लुटो लुङश्च यथायथं प्रयोक्तव्याः)

1. ನಾವು ನಾಳೆ ನಾಟಕವನ್ನು ಅಭಿನಯಿಸುವೆವು. 2. ಅವರು ರಜಾ ದಿನಗಳಲ್ಲಿ ಹಳ್ಳಿಗೆ ಹೋಗುವರು. 3. ಈ ನೆಲದಲ್ಲಿ ತೆಂಗಿನಮರಗಳು ಚೆನ್ನಾಗಿ ಬೆಳೆಯುವುವು. 4. ಅವಳು ಭಾರತೀಯ ಸಂಸ್ಕೃತಿಯನ್ನು ಕುರಿತು ಸಭೆಯಲ್ಲಿ ಮಾತಾಡುವಳು. 5. ನಾವು ಮನೆಯನ್ನು ಬಿಟ್ಟುಹೋದರೆ ಕಳ್ಳರು ಸಾಮಾನುಗಳನ್ನು ಕದಿಯುವರು. 6. ದುರ್ಭಿಕ್ಷವು ಬಂದರೆ ನೀವು ಏನನ್ನು ತಿನ್ನುವಿರಿ ? 7. ನಾನು ಏನು ಮಾಡುವೆನೋ ಅದನ್ನು ನೀನು ನೋಡುವೆ. 8. ಯಾವನು ಈ ಕೆಲಸವನ್ನು ಮಾಡಿದ ? 9. ಅವಳಿಂದ ಹಾಗೆ

ಹೇಳೋಣವಾಯಿತು. ಆದರೆ ನಿನ್ನಿಂದ ಸುಮ್ಮನೆ ಇರೋಣವಾಯಿತು. 10. ಸೀತೆ ಯಾವ ಕಷ್ಟವನ್ನೂ ಲೆಕ್ಕಿಸಲಿಲ್ಲ. 11. ಅವನು ಕದ್ದನು, ಆದ್ದರಿಂದ ಪೋಲೀಸರಿಂದ ಹಿಡಿಯಲ್ಪಟ್ಟನು. 12. ಆಗ ನೀವು ಅಂಗಡಿಗೆ ಹೋದಿರಿ. 13. ನನ್ನಿಂದ ಅವಳು ಯಾವಾಗ ನೋಡಲ್ಪಟ್ಟಳೋ ಆಗ, ಅವಳಿಂದ ನಾಚಿಕೆ ಪಡೋಣವಾಯಿತು.

೫. ಲೃಙ್; ಆಶೀರ್ಲಿಙ್

ಲೃಙ್

1. ಭವಿಷ್ಯತ್ ಮತ್ತು ಭೂತಕಾಲಗಳನ್ನು ಸೂಚಿಸುವಾಗ ಲೃಙ್ ಬರುತ್ತದೆ. ಇದರ ಪ್ರಯೋಗದಲ್ಲಿ ಒಂದು ವೈಶಿಷ್ಟ್ಯ ಉಂಟು. ಎರಡು ಕ್ರಿಯೆಗಳಿರುವಾಗ ಒಂದು ಇನ್ನೊಂದಕ್ಕೆ ಹೇತುವಾಗಿದ್ದರೆ ಅಲ್ಲಿ ಹೇತು ಹೇತುಮದ್ಭಾವ ಇದೆ ಎನ್ನುತ್ತಾರೆ. ಕ್ರಿಯೆ ನಡೆಯದೆ ಇರುವುದಕ್ಕೆ ಕ್ರಿಯಾತಿಪತ್ತಿ ಎಂದು ಹೆಸರು. ಕ್ರಿಯೆಯ ಅನಿಷ್ಪತ್ತಿ ಎಂದರ್ಥ. ಹೇತು ಹೇತುಮದ್ಭಾವ ಮತ್ತು ಕ್ರಿಯಾತಿಪತ್ತಿ ತೋರುವಾಗ ಎರಡು ಧಾತುಗಳ ಮೇಲೂ ಲೃಙ್ ಬರುತ್ತದೆ.

ಉದಾಹರಣೆ- सुवृष्टिश्चेदभविष्यत् सुभिक्षमभविष्यत्=ಒಳ್ಳೆಯ ಮಳೆ ಆಗಿದ್ದರೆ ಸುಭಿಕ್ಷವಾಗುತ್ತಿತ್ತು. ಇಲ್ಲಿ ಮಳೆಯಾಗುವುದು ಸುಭಿಕ್ಷವಾಗುವುದಕ್ಕೆ ಹೇತು. ಸುಭಿಕ್ಷ ಹೇತುಮತ್. ಆದ್ದರಿಂದ ಹೇತು ಹೇತುಮದ್ಭಾವ ಇದೆ. ಮಳೆಯೂ ಆಗಲಿಲ್ಲ, ಸುಭಿಕ್ಷವೂ ಆಗಲಿಲ್ಲ ಎಂದು ಪ್ರತೀತವಾಗುವುದರಿಂದ ಕ್ರಿಯೆಯ ಅನಿಷ್ಪತ್ತಿಯೂ ತೋರುತ್ತದೆ. ಹಿಂದೆ ಮಳೆಯಾಗಿದ್ದರೆ ಸುಭಿಕ್ಷ ವಾಗುತ್ತಿತ್ತು ಎಂಬ ಅಭಿಪ್ರಾಯವಾದರೆ ಭೂತಕಾಲವಾಯಿತು. ಮುಂದೆ ಮಳೆಯಾದರೆ ಸುಭಿಕ್ಷವಾದೀತು, ಆದರೆ ಮಳೆಯೂ ಆಗದು ಸುಭಿಕ್ಷವೂ ಆಗದು-ಎಂಬ ಅಭಿಪ್ರಾಯವಾದರೆ ಭವಿಷ್ಯತ್ಕಾಲವಾಗುವುದು.

2. कतर, कतम, किं, कथम्-ಶಬ್ದಗಳನ್ನು ಬಳಸಿದಾಗ ನಿಂದೆ ತೋರುತ್ತಿದ್ದರೆ ಭೂತ, ಭವಿಷ್ಯತ್ತುಗಳಲ್ಲಿ ಲೃಙ್ ಬರುತ್ತದೆ. ಉದಾಹರಣೆ-

1. कतर, कतमो वा मृषा अवदिष्यत् ?=ಯಾವನು ಸುಳ್ಳು ಹೇಳಿದನು ?-ಹೇಳುವನು ?

2. कः खलु गुरुद्रोहमकरिष्यत् ?=ಯಾವನು ಗುರುದ್ರೋಹ ಮಾಡಿದ ?-ಮಾಡುವನು ?

3. कथं धर्ममत्यक्षः ?=ಹೇಗೆ ಧರ್ಮವನ್ನು ತ್ಯಜಿಸಿದೆ ?- ತ್ಯಜಿಸಿವೆ ?

ಧಾತುವಿನ ಮುಂದೆ ಬಂದ ಲೃಙ್ ಸ್ಥಾನದಲ್ಲಿ ತಿಙಾದೇಶ ಬರುತ್ತದೆ. ಇದು ಉಭಯಪದಗಳಲ್ಲಿಯೂ ಅನದ್ಯತನಭೂತ (लङ्) ದಂತೆ ಇರುತ್ತದೆ. ಧಾತುವಿನ ಹಿಂದೆ ಅಡಾಗಮ ಬರುತ್ತದೆ. ಮುಂದೆ स्य ಎಂಬ ವಿಕರಣ ಪ್ರತ್ಯಯ ಹತ್ತುತ್ತದೆ. ಸೇಟ್ ಧಾತುವಾದಾಗ स्य ಎಂಬುದಕ್ಕೆ ಇಡಾಗಮ ಬರುತ್ತದೆ. ಇಡಾಗಮ ಬಂದಾಗಲೂ ಕಕಾರದ ಮುಂದೆ ಇದ್ದಾಗಲೂ स्य ಎಂಬುದು ष्य ಆಗುತ್ತದೆ.

परस्मैपदम्

भू

प्र.	अभविष्यत्	अभविष्यताम्	अभविष्यन्
म.	अभविष्यः	अभविष्यतम्	अभविष्यत
उ.	अभविष्यम्	अभविष्याव	अभविष्याम

त्यज्

प्र.	अत्यक्ष्यत्	अत्यक्ष्यताम्	अत्यक्ष्यन्
म.	अत्यक्ष्यः	अत्यक्ष्यतम्	अत्यक्ष्यत
उ.	अत्यक्ष्यम्	अत्यक्ष्याव	अत्यक्ष्याम

आत्मनेपदम्

वृध्

प्र.	अवर्धिष्यत	अवर्धिष्येताम्	अवर्धिष्यन्त
म.	अवर्धिष्यथाः	अवर्धिष्येथाम्	अवर्धिष्यध्वम्
उ.	अवर्धिष्ये	अवर्धिष्यावहि	अवर्धिष्यामहि

लभ्

प्र.	अलप्स्यत	अलप्स्येताम्	अलप्स्यन्त
म.	अलप्स्यथाः	अलप्स्येथाम्	अलप्स्यध्वम्
उ.	अलप्स्ये	अलप्स्यावहि	अलप्स्यामहि

ಆಶೀರ್ಲಿಙ್

ಆಶೀರರ್ಥದಲ್ಲಿ ಬರುವ ಲಿಙ್ ಆಶೀರ್ಲಿಙ್ ಎನಿಸುತ್ತದೆ. ಆಶಿಸ್ಸೆಂದರೆ ಹಿತವು ಪ್ರಾಪ್ತವಾಗಲೆಂಬ ಇಚ್ಛೆ. ವಿಧಿಲಿಙ್ ರೂಪಗಳಿಗೂ ಇದರ ರೂಪಗಳಿಗೂ ತುಂಬ ಭೇದವಿದೆ. ವಿಕರಣ ಪ್ರತ್ಯಯಗಳೂ ಸೇರಿ ತಿಙ್ಪ್ರತ್ಯಯ ರೂಪಗಳಿವು.

परस्मैपदम्

प्र.	यात्	यास्ताम्	यासुस्
म.	यास्	यास्तम्	यास्त
उ.	यासम्	यास्व	वास्म

आत्मनेपदम्

प्र.	सीष्ट	सीयास्ताम्	सीरन्
म.	सीष्ठाः	सीयास्थाम्	सीध्वम् (ढ्वम्)
उ.	सीय	सीवहि	सीमहि

ಸೇಟ್ ಧಾತುಗಳಾದರೂ ಪರಸ್ಮೈಪದಗಳಿಗೆ ಇಡಾಗಮ ಬರುವುದಿಲ್ಲ. ಆತ್ಮನೇಪದಗಳಿಗೆ इद् ಬಂದಾಗ ಮುಂದಿನ ಸಕಾರವು ಷಕಾರವಾಗುತ್ತದೆ.

परस्मैपदम्

भू

प्र.	भूयात्	भूयास्ताम्	भूयासुः
म.	भूयाः	भूयास्तम्	भूयास्त
उ.	भूयासम्	भूयास्व	भूयास्म

जि

प्र.	जीयात्	जीयास्ताम्	जीयासुः
म.	जीयाः	जीयास्तम्	जीयास्त
उ.	जीयासम्	जीयास्व	जीयास्म

आत्मनेपदम्

वृध्

प्र.	वर्धिषीष्ट	वर्धिषीयास्ताम्	वर्धिषीरन्
म.	वर्धिषीष्ठाः	वर्धिषीयास्थाम्	वर्धिषीध्वम्
उ.	वर्धिषीय	वर्धिषीवहि	वर्धिषीमहि

लभ्

प्र.	लप्सीष्ट	लप्सीयास्ताम्	लप्सीरन्
म.	लप्सीष्ठाः	लप्सीयास्थाम्	लप्सीध्वम्
उ.	लप्सीय	लप्सीवहि	लप्सीमहि

अभ्यासः ८

कर्णाटकभाषया परिवर्तयत-

१. यद्यसौ सम्यगपठिष्यत्, तर्हि परीक्षामुत्तीर्णोऽभविष्यत् । २. देवश्चेत् अवर्षिष्यत् बीजान्यवाप्स्म । ३. कः खलु नाम प्रवचनसमये शब्दमकरिष्यत् ? ४. यदि लक्ष्मणः आगमिष्यत्, तदा रावणः सीतामपहर्तुं नाशक्ष्यत् । ५. स्पृहणीयशोभमिदं द्वन्द्वं यदि धाता नायोजयिष्यत्, तस्य रूपविधानयत्नः विफलोऽभविष्यत् । ६. काले यद्यागमिष्यः धनमलप्स्यथाः । ७. यत्ते अग्ने तेजस्तेनाहं तेजस्वी भूयासम् । ८. इमे बाला आयुषा वर्धिषीरन्, विद्यया च जीयासुः । ९. पयः पेयाः, आरोग्यश्चलाप्सीष्ठाः । १०. विद्यार्जनाय यतिषीध्वम्, सुखिनश्च जीव्यास्त । ११. गुरोः प्रसादेन विद्वांसो भूयास्म । १२. जीयाद् गीर्वाणभारती ।

अभ्यासः ९

संस्कृतभाषया परिवर्तयत-

1. ರಾಜನು ದಂಡಿಸದಿದ್ದರೆ ಜನರು ಒಬ್ಬರನ್ನೊಬ್ಬರು ತಿಂದು ಬಿಡುತ್ತಿದ್ದರು. 2. ಬೆಂಕಿ ಉರಿದಿದ್ದರೆ ಅಡಿಗೆಯನ್ನು ಮಾಡುತ್ತಿದ್ದಳು. 3. ನೀನು ಬಂದಿದ್ದರೆ ಪುಸ್ತಕವನ್ನು ಕೊಡುತ್ತಿದ್ದೆನು. 4. ತಂದೆ ನೋಡಿದ್ದರೆ ವಿಷಣ್ಣನಾಗುತ್ತಿದ್ದನು. 5. ಮಳೆಗಾಲ ಬಂದರೆ ಬಾವಿಯಲ್ಲಿ ನೀರು ಹೆಚ್ಚೀತು.[1] 6. ನೀನು ಓದಿದರೆ ಉಪಾಧ್ಯಾಯರು ಕಟುವಚನಗಳನ್ನು ಹೇಳುವುದಿಲ್ಲ. 7. ನಾನು ಹಾಗೆ ಮಾಡಿದ್ದರೆ ಗುರುಗಳು ನಿಂದಿಸುತ್ತಿದ್ದರು. 8. ಅವರು ದೇವರನ್ನು ಭಜಿಸಲಿ. 9. ನೀವು ದೀರ್ಘಕಾಲ ಬಾಳಿರಿ. 10. ನಾವು ಧನವಂತರಾಗಬೇಕು. 11. ಭಾರತೀಯರು

---

1. अवर्धिष्यत

ಉದ್ಯಮದಿಂದ ವರ್ಧಿಸಲಿ. 12. ಅವನು ಕದಿಯದಿರಲಿ. 13. ನೀವಿಬ್ಬರೂ ವಿದ್ಯೆಯನ್ನು ಪಡೆಯಿರಿ.

೬. ಸತಿಸಪ್ತಮೀ

ಈ ವಾಕ್ಯಗಳನ್ನು ಓದಿರಿ :-

१. गोषु दुह्यमानासु गतः=ಹಸುಗಳು ಹಾಲನ್ನು ಕರೆಯಲ್ಪಡುತ್ತಿರುವಾಗ ಹೋದನು.

२. गोषु दुग्धासु गतः=ಹಸುಗಳು ಹಾಲು ಕರೆಯಲ್ಪಟ್ಟಮೇಲೆ ಹೋದನು.

३. गोषु धोक्ष्यमाणासु गतः=ಹಸುಗಳು ಮುಂದೆ ಹಾಲು ಕರೆಯಲ್ಪಡಬೇಕೆಂದಿರುವಾಗ ಮೊದಲು ಹೋದನು.

ಇಲ್ಲಿ ದೋಹನ, ಗಮನ ಎಂಬ ಎರಡು ಕ್ರಿಯೆಗಳಿವೆ. ಗಮನಕ್ರಿಯೆ ಯಾವಾಗ ನಡೆಯಿತೆಂಬುದನ್ನು ದೋಹನಕ್ರಿಯೆಯು ಜ್ಞಾಪಿಸುತ್ತದೆ. ದೋಹನವು ಜ್ಞಾಪಕ. ಗಮನವು ಜ್ಞಾಪ್ಯ. ಆದ್ದರಿಂದ ಇಲ್ಲಿ ಜ್ಞಾಪ್ಯ ಜ್ಞಾಪಕಭಾವ ಇದೆ. ಹೀಗೆ ಒಂದು ವಾಕ್ಯದಲ್ಲಿ ಎರಡು ಕ್ರಿಯೆಗಳಿದ್ದಾಗ ಜ್ಞಾಪಕಕ್ರಿಯೆಗೆ ಯಾವುದು ಆಶ್ರಯವೋ ಅಂತಹ ಆಶ್ರಯವಾಚಕದ ಮೇಲೆ ಸಪ್ತಮೀ ವಿಭಕ್ತಿ ಬರುತ್ತದೆ. ಇಲ್ಲಿ ಜ್ಞಾಪಕವಾದ ದೋಹನಕ್ರಿಯೆಗೆ ಗೋವುಗಳು ಆಶ್ರಯ. 'ದುಹ್ಯಮಾನ' ಮುಂತಾದ ಕ್ರಿಯಾಬೋಧಕ ಶಬ್ದಗಳೂ ಅವುಗಳಿಗೆ ವಿಶೇಷಣಗಳಾದ್ದರಿಂದ ವಿಶೇಷ್ಯಾನುಸಾರವಾಗಿ ಅವುಗಳ ಮೇಲೆ ಸಪ್ತಮೀ ಬಂದಿದೆ.

ಈ ವಾಕ್ಯಗಳನ್ನು ಓದಿರಿ:-

१. मयि वदति सः उदतिष्ठत्=ನಾನು ಹೇಳುತ್ತಿರುವಾಗ ಅವನು ಎದ್ದುನಿಂತನು.

२. त्वयि गते सः आगच्छत्=ನೀನು ಹೋದಮೇಲೆ ಅವನು ಬಂದನು.

३. तस्यामुपविष्टायामहं ब्रवीमि=ಅವಳು ಕುಳಿತಮೇಲೆ ನಾನು ಮಾತನಾಡುತ್ತೇನೆ.

ಇಲ್ಲಿಯೂ ಒಂದು ಕ್ರಿಯೆ ಇನ್ನೊಂದು ಕ್ರಿಯೆಯನ್ನು ಜ್ಞಾಪಿಸುವುದರಿಂದ ಜ್ಞಾಪ್ಯ ಜ್ಞಾಪಕಭಾವ ಇದೆ. ಇಂತಹ ಸಂದರ್ಭದಲ್ಲಿ ಸತ್ ಎಂಬ ಶಬ್ದಕ್ಕೆ ಅಧ್ಯಾಹಾರವಿರುತ್ತದೆ. ಆದ್ದರಿಂದ ಈ ಬಗೆಯ ಸಪ್ತಮಿಯನ್ನು सत् सप्तमी, सति सप्तमी ಎಂದು ಹೇಳುತ್ತಾರೆ. सत् ಶಬ್ದವು ವಿಶೇಷ್ಯದ ಲಿಂಗವಚನಗಳನ್ನು ಅನುಸರಿಸುತ್ತದೆ. ಹೇಗೆಂದರೆ,

रामे वदति सति दशरथोऽब्रवीत् ।
रामलक्ष्मणयोः वदतोः सतोः...।
रामलक्ष्मणभरतेषु वदत्सु सत्सु...।
सीतायां वदन्त्यां सत्यां... ...।
सीताकौसल्ययोः वदन्त्योः सत्योः...।
सीताकौसल्यासुमित्रासु वदन्तीषु सतीषु... ...।

ಇಂತಹ ವಾಕ್ಯಗಳನ್ನು ಭಾಷಾಂತರಿಸುವಾಗ ಸಪ್ತಮ್ಯಂತವನ್ನು ಕನ್ನಡದಲ್ಲಿ ಪ್ರಥಮಾ ವಿಭಕ್ತಿಗೆ ತಿರುಗಿಸಿಕೊಳ್ಳಬೇಕಾಗುತ್ತದೆ.

अभ्यासः १०

कर्णाटकभाषया परिवर्तयत-

१. उदिते सूर्ये कृषीवलाः क्षेत्रमगच्छन् । २. विरतवचसि तस्यां चन्द्रापीडो बभाषे । ३. विक्रीते करिणि किमङ्कुशे विवादः । ४. न हि भिक्षुको भिक्षुकान्तरं याचितुमर्हति सत्यन्यस्मिन्नभिक्षुके । ५. भक्षितेऽपि लशुने न शान्तो व्याधिः । ६. सतीषु गोषु करभीं दोग्धुमिच्छति । ७. शान्ते कर्मणि भेतालोदयः । ८. विद्राणे वरुणे,

गते हुतवहे, वैवस्वते मूर्च्छिते, स्फारः कोऽपि बभूव दानवबले हर्षाट्टहासध्वनिः । ९. प्रभातायां शर्वर्यां जना उदतिष्ठन् । १०. स्थिते मयि राज्ञि, भीरु, अलं भयेन । ११. जीवत्सु तातपादेषु को भयस्यावकाशः ? १२. पश्यत्सु कपियूथेषु पुप्लुवे स महार्णवम् ।

अभ्यासः ११

संस्कृतभाषया परिवर्तयत-

1. ನೀನಿರುವಾಗ ನನಗೆ ಭಯವೇನು ? 2. ಕರು ಓಡಿಹೋಗಲು ಹುಡುಗನು ಹಿಂದೆ ಓಡಿದನು. 3. ಗಂಟೆ ಹೊಡೆದಮೇಲೆ ಎಲ್ಲರೂ ಹೋಗಿರಿ. 4. ಚಂದ್ರನು ಉದಿಸಲಾಗಿ ಕತ್ತಲೆ ನಶಿಸಿತು. 5. ಪುಸ್ತಕವನ್ನು ಬರೆದಾದ ಮೇಲೆ ಮುದ್ರಣಕ್ಕೆ ಕೊಡುವೆನು. 6. ಕೌಸಲ್ಯೆ ಬರಲಾಗಿ ಸೀತೆ ಎದ್ದು ನಿಂತುಕೊಂಡಳು. 7. ಮನೆಗಳು ದೋಚಲ್ಪಟ್ಟ[1] ಮೇಲೆ ಪೋಲೀಸಿನವರು ಬಂದರು. 8. ಮಗಳು ಪರೀಕ್ಷೆಯಲ್ಲಿ ಉತ್ತೀರ್ಣಳಾಗಲು ತಾಯಿತಂದೆಗಳು ಸಂತೋಷಿಸಿದರು. 9. ಮಳೆಗಾಲ ಬಂದಾಗ ಹೊಳೆಯಲ್ಲಿ ನೀರು ಹೆಚ್ಚುತ್ತದೆ. 10. ಅವರಿಬ್ಬರು ಹೋದಮೇಲೆ ಹೇಳುವೆನು. 11. ಹೀಗೆ ನನ್ನ ತಾಯಿ ಹೇಳಲಾಗಿ ನಾನು ಸುಮ್ಮನಾದೆನು. 12. ನೀವು ಬಂದಾಗ ನಾನು ಮನೆಯಲ್ಲಿರಲಿಲ್ಲ.

೭. ನಿರ್ಧಾರಣ ಷಷ್ಠೀ-ಸಪ್ತಮೀ

ಜಾತಿ, ಗುಣ, ಕ್ರಿಯಾ, ಸಂಜ್ಞಾ-ಇವುಗಳಲ್ಲೊಂದನ್ನು ಅವಲಂಬಿಸಿ, ಸಮುದಾಯದಿಂದ ಅದರ ಅವಯವವಾದ ವಸ್ತುವನ್ನೋ ವ್ಯಕ್ತಿಯನ್ನೋ ಬೇರ್ಪಡಿಸುವುದಕ್ಕೆ ನಿರ್ಧಾರಣ ಎಂದು ಹೆಸರು. ನಿರ್ಧಾರಣ ಮಾಡುವಾಗ ಯಾವ ಸಮುದಾಯದಿಂದ ಬೇರ್ಪಡಿಸುತ್ತೇವೋ ಆ ಸಮುದಾಯ ವಾಚಕದ ಮೇಲೆ ಷಷ್ಠೀ ವಿಭಕ್ತಿಯಾಗಲಿ, ಸಪ್ತಮೀ ವಿಭಕ್ತಿಯಾಗಲಿ ಬರುತ್ತದೆ.

---

1. लुण्ठितेषु

ಉದಾಹರಣೆ-

१. प्राणिनां प्राणिषु वा मानवः श्रेष्ठः ।

२. गवां गोषु वा कृष्णा आनीयताम् ।

३. गच्छतां गच्छत्सु वा धावन् शीघ्रमुपसर्पति ।

४. छात्राणां छात्रेषु वा चैत्रो बुद्धिमान् ।

ಮೊದಲನೆಯ ವಾಕ್ಯದಲ್ಲಿ ಪ್ರಾಣಿಗಳು ಸಮುದಾಯ. ಮಾನವನನ್ನು ಶ್ರೇಷ್ಠನೆಂದು ಹೇಳಿ ಪ್ರಾಣಿ ಸಮುದಾಯದಿಂದ ಬೇರ್ಪಡಿಸಲಾಗಿದೆ. ಮಾನವತ್ವ ಜಾತಿ. ಈ ಜಾತಿಯನ್ನು ಅವಲಂಬಿಸಿ ಬೇರ್ಪಡಿಸುವುದರಿಂದ ಸಮುದಾಯ ವಾಚಕದ ಮೇಲೆ ಷಷ್ಠೀ ಅಥವಾ ಸಪ್ತಮೀ ಬಂದಿದೆ. ಎರಡನೆಯ ವಾಕ್ಯದಲ್ಲಿ ಗೋವುಗಳು ಸಮುದಾಯ. ಕೃಷ್ಣವರ್ಣ ಗುಣ. ಮೂರನೆಯದರಲ್ಲಿ ಹೋಗತಕ್ಕವರು ಸಮುದಾಯ. ಧಾವನ ಕ್ರಿಯೆ. ನಾಲ್ಕನೆಯದರಲ್ಲಿ ಛಾತ್ರರು ಸಮುದಾಯ. ಚೈತ್ರ ಎಂಬುದು ಸಂಜ್ಞೆ.

अभ्यासः १२

कर्णाटकभाषया परिवर्तयत-

१. काव्येषु नाटकं रम्यम् । २. दर्शनेषु वेदान्तः प्रधानम् । ३. वायसः पक्षिणां धूर्तः । ४. श्रीरामो धनुर्विदां श्रेष्ठः । ५. शिष्येषु मैत्रः संमतः । ६. पतिव्रतासु सीता मूर्धन्या । ७. मोक्षसाधनानां भक्तिर्गरीयसी । ८. सेवासुगुरुसेवा प्रशस्ता । ९. युध्यमानानां कूटयोधी निन्द्यः । १०. पूज्यानां माता विशिष्यते । ११. दानेष्वन्नदानं प्रशस्यते । १२. वृक्षाणां नारिकेलो बहूपयुज्यते ।

अभ्यासः १३

संस्कृतभाषया परिवर्तयत-

1. ಭಾಷೆಗಳಲ್ಲಿ ಸಂಸ್ಕೃತಭಾಷೆ ಮಧುರವಾದುದು. 2. ಕಾಡುಪ್ರಾಣಿಗಳಲ್ಲಿ ಹುಲಿ ಭೀಕರವಾದುದು. 3. ಸತ್ಯವಾದಿಗಳಲ್ಲಿ ಹರಿಶ್ಚಂದ್ರ ಶ್ರೇಷ್ಠ. 4. ಅಕ್ಷರಗಳಲ್ಲಿ ಅಕಾರ ಮೊದಲನೆಯದು. 5. ಬೆಟ್ಟಗಳಲ್ಲಿ ಹಿಮಾಲಯ ದೊಡ್ಡದು. 6. ದೇಶಭಕ್ತರಲ್ಲಿ ಶಿವಾಜಿ ಗಣ್ಯನಾದವನು. 7. ನದಿಗಳಲ್ಲಿ ಗಂಗಾನದಿ ವಿಶಿಷ್ಟವಾದುದು. 8. ವಸ್ತ್ರಗಳಲ್ಲಿ ಬಿಳಿಯ ವಸ್ತ್ರ ನನಗೆ ಹಿಡಿಸುತ್ತದೆ. 9. ಓಡುವವರಲ್ಲಿ ಗೋವಿಂದನು ಬೇಗ ಓಡುತ್ತಾನೆ. 10. ಕೀಟಗಳಲ್ಲಿ ಜೇನುನೊಣ ಹೆಚ್ಚು ಉಪಕಾರಿ. 11. ದೇವತೆಗಳಲ್ಲಿ ಸರಸ್ವತಿಯನ್ನು ನಾನು ಪೂಜಿಸುತ್ತೇನೆ. 12. ಲೋಹಗಳಲ್ಲಿ ಚಿನ್ನವು ಹೆಚ್ಚು ಮೌಲ್ಯದ್ದು ಆದರೆ ಕಬ್ಬಿಣ ಹೆಚ್ಚು ಉಪಯುಕ್ತವಾದದ್ದು.

೮. ವಿಭಕ್ತಿ ವಿಪರ್ಯಾಯ

ಪ್ರಥಮಾದಿ ವಿಭಕ್ತಿಗಳು ಸಾಮಾನ್ಯವಾಗಿ ಯಾವ ಅರ್ಥದಲ್ಲಿ ಬರುತ್ತವೆಯೆಂಬುದನ್ನು ಹಿಂದೆ ಕಲಿತಿದ್ದೀರಿ. ಅದನ್ನೀಗ ಸ್ಮರಿಸಿಕೊಳ್ಳಬಹುದು.

१. प्रथमा विभक्तिः-ಕರ್ತರಿಪ್ರಯೋಗದಲ್ಲಿ ಕರ್ತೃಪದದ ಮೇಲೂ ಕರ್ಮಣಿಪ್ರಯೋಗದಲ್ಲಿ ಕರ್ಮಪದದ ಮೇಲೂ ಬರುತ್ತದೆ.

रामो रावणं हन्ति । रामेण रावणो हन्यते ।

२. संबोधन प्रथमा-ಸಂಬೋಧನದಲ್ಲಿ.

सीते, वीणामुपनय ।

३. द्वितीया-ಕರ್ತರಿಪ್ರಯೋಗದಲ್ಲಿ ಕರ್ಮಪದದ ಮೇಲೆ.

शालामगच्छत् पुत्रः । चन्द्रं पश्यति बालकः ।

४. तृतीया-ಕರ್ಮಣಿಪ್ರಯೋಗದಲ್ಲಿ ಕರ್ತೃಪದಕ್ಕೆ; ಕರಣವಾಚಕದ ಮೇಲೆ.

गुरुणा पाठ्यते शास्त्रम् । धनिना दीयते धनम् ।
हस्तेन मार्जयति । दण्डेन ताडयति ।

५. चतुर्थी-ಸಂಪ್ರದಾನದ ಮೇಲೆ.
याचकेभ्यो भिक्षां यच्छति । शिष्याय चपेटां ददाति ।

६. पञ्चमी-ಅಪಾದಾನದ ಮೇಲೆ.
वृक्षात् पतति पर्णम् । ग्रामात् गच्छति चैत्रः काननम् ।

७. षष्ठी-ಸಂಬಂಧವನ್ನು ಹೇಳುವಾಗ ಸಂಬಂಧಿ ವಾಚಕದ ಮೇಲೆ.
मम गृहम्; वस्त्रस्य मृदुता ।

८. सप्तमी-ಅಧಿಕರಣ ವಾಚಕದ ಮೇಲೆ.
क्षेत्रे रोहन्ति सस्यानि । जले वसन्ति मीनाः ।

ಇದಿಷ್ಟು ಸಾಮಾನ್ಯವಿಧಿ. ವಿಶೇಷವಿಧಿಗಳಿಂದ ಈ ವಿಭಕ್ತಿಗಳಿಗೆ ಬದಲಾಗಿ ಬೇರೆ ಬೇರೆ ವಿಭಕ್ತಿಗಳು ಬರುತ್ತವೆ. ಇದನ್ನು ವಿಭಕ್ತಿ ವಿಪರ್ಯಾಯ ಅಥವಾ ವಿಭಕ್ತಿ ವಿಪರಿಣಾಮ ಎನ್ನಬಹುದು. ಕನ್ನಡದಲ್ಲಿ ವಿಭಕ್ತಿಪಲ್ಲಟ ಎನ್ನುತ್ತಾರೆ. ಮುಖ್ಯವಾದ ಕೆಲವು ವಿಭಕ್ತಿ ವಿಪರ್ಯಾಯಗಳನ್ನು ಕೆಳಗೆ ತಿಳಿಸಲಾಗಿದೆ.

१. द्वितीयाविभक्तिः

1. दुह्, याच् ಮೊದಲಾದ ಕೆಲವು ಧಾತುಗಳ ಯೋಗವಿದ್ದಾಗ ಕರ್ಮಕ್ಕೆ ಸಂಬಂಧಿಸಿದ ಶಬ್ದಕ್ಕೆ ಕರ್ಮಸಂಜ್ಞೆ ಬಂದು ದ್ವಿತೀಯಾ ಬರುತ್ತದೆ.

ಈ ಶ್ಲೋಕವನ್ನು ಕಲಿಯಿರಿ :-

दुह् याच् पच् दण्ड् रुधि प्रच्छि चि ब्रू शासु जि मथ् मुषाम् ।
कर्मयुक्स्यादकथितं तथा स्यान्नी ह कृष् वहाम् ॥

गां पयो दोग्धि । धनिकं धनं याचते । तण्डुलान् ओदनं पचति । अपराधिनं शतं दण्डयति । गोष्ठमवरुणद्धि गाम् । माणवकं पन्थानं पृच्छति । लतामपचिनोति पुष्पाणि । शिष्यं धर्मं ब्रूते । अन्तेवासिनं कर्तव्यमनुशास्ति । राज्यं जयति देवदत्तम् । नवनीतं मथ्नाति दधि । देवदत्तं शतं मुष्णाति । ग्राममजां नयति । लङ्कां हरति सीताम् । गुहां कर्षति मृगम् । गृहं वहति काष्ठम् ।

ಈ ಬಗೆಯ ಕರ್ಮಕ್ಕೆ ಅಕಥಿತಕರ್ಮವೆಂದೂ ಗೌಣಕರ್ಮವೆಂದೂ ಹೆಸರು. ಮೇಲಿನ ಪ್ರತಿಯೊಂದು ವಾಕ್ಯಗಳಲ್ಲಿ ಮೊದಲನೆಯದು ಗೌಣಕರ್ಮ.

2. ಕ್ರಿಯಾವಿಶೇಷಣದ ಮೇಲೆ ದ್ವಿತಿಯಾ.

शोभनं पचति । सविनयं भाषते ।

3. 'अधिशीङ् स्थासां कर्म' । अधि ಉಪಸರ್ಗ ಸಹಿತವಾದ शीङ्, स्था, आस् ಧಾತುಗಳಿದ್ದಾಗ ಆಧಾರಕ್ಕೆ ಕರ್ಮಸಂಜ್ಞೆ ಬಂದು ದ್ವಿತೀಯಾ ಬರುತ್ತದೆ.

वैकुण्ठमधिशेते । गृहमध्यास्ते । वनमधितिष्ठति ।

4. 'उपान्वध्याङ् वसः । उप अनु, अधि, आङ् ಉಪಸರ್ಗ ಸಹಿತ वस् ಧಾತುವಿದ್ದಾಗ ಆಧಾರದ ಮೇಲೆ.

वनमुपवसति । नगरमध्युवास । चित्रकूटमावसत् ।

5. 'कालाध्वनोरत्यन्तसंयोगो' ನಿರಂತರ ಸಂಬಂಧ ತೋರುವಾಗ ಕಾಲ, ಅಧ್ವವಾಚಕಗಳ ಮೇಲೆ.

मासमधीते=ಒಂದು ತಿಂಗಳವರೆಗೆ ಪ್ರತಿದಿನ ಕಲಿಯುತ್ತಾನೆ.

क्रोशं कुटिला नदी=ಒಂದು ಕ್ರೋಶ ಪರ್ಯಂತ ನದಿ ಡೊಂಕಾಗಿದೆ.

6. अन्तरेण, अन्तरा, उभयतः, परितः, अभितः, धिक्, समया, निकषा ಮೊದಲಾದ ಅವ್ಯಯಗಳ ಯೋಗವಿದ್ದಾಗ.

धनमन्तरेण कार्यं न सिध्यति । धनमन्तरा । ग्राममुभयतः । धिक् त्वाम् । लङ्कां निकषा ।

7. ಉಪಸರ್ಗಗಳಂತಿರುವ ಕೆಲವು ಕರ್ಮಪ್ರವಚನೀಯಗಳ ಯೋಗವಿದ್ದಾಗ.

वृक्षं प्रति विद्योतते विद्युत् । उपदिशति शिष्यं प्रति । प्रावर्षज्जपमनु । भक्तो विष्णुं परि ।

२. तृतीया

1. 'सहयुक्तेऽप्रधाने' । ಸಹ ಶಬ್ದಾರ್ಥವಿರುವ सह; साकं, सार्धं, समं ಶಬ್ದಗಳ ಯೋಗವಿದ್ದರೆ ತೃತೀಯಾ ವಿಭಕ್ತಿ ಬರುತ್ತದೆ.

पुत्रेण सहागतः पिता । भर्त्रा साकं गता सीता ।

2. 'येनाङ्गविकारः' । ಯಾವ ಅವಯವದ ವಿಕಾರದಿಂದ ಅವಯವಿಯ ವಿಕಾರ ಗೊತ್ತಾಗುವುದೋ ಅಂಥ ಅವಯವದ ಮೇಲೆ.

अक्ष्णा काणः । पादेन खञ्जः । हस्तेन कुणिः ।

3. ಹೇತುವಾಚಕದ ಮೇಲೆ.

दण्डेन घटः । विद्यया सुखम् ।

३. चतुर्थी

1. 'रुच्यर्थानां प्रीयमाणः' । ರುಚ್ಯರ್ಥದ ಧಾತುವಿದ್ದಾಗ ಯಾರಿಗೆ ಪ್ರೀತಿಯಾಗುವುದೋ ಅದರ ವಾಚಕದ ಮೇಲೆ ಚತುರ್ಥೀ ಬರುತ್ತದೆ.

हरये रोचते भक्तिः । बालकाय स्वदते फलम् ।

2. 'धारेरुत्तमर्णः' । धारि ಧಾತುವಿನ ಪ್ರಯೋಗವಿದ್ದಾಗ ಸಾಲವನ್ನು ಕೊಟ್ಟವನನ್ನು ಹೇಳುವ ಶಬ್ದದ ಮೇಲೆ.

चैत्राय शतं रूप्यकाणि धारयति मैत्रः । ಚೈತ್ರನಿಗೆ ಮೈತ್ರನು ನೂರು ರೂಪಾಯಿಗಳನ್ನು ಕೊಡಬೇಕಾಗಿದೆ ಎಂದರ್ಥ. ಸಾಲವನ್ನು ಕೊಟ್ಟವನ್ನು ಚೈತ್ರ.

3. 'स्पृहेरीप्सितः' । स्पृहिಯ ಪ್ರಯೋಗವಿದ್ದಾಗ ಕರ್ಮಪದಕ್ಕೆ ಚತುರ್ಥೀ ಬರುತ್ತದೆ. पुष्पेभ्यः स्पृहयति । ದ್ವಿತೀಯಾ ವಿಭಕ್ತಿಯೂ ಬರಬಹುದು. पुष्पाणि स्पृहयति ।

4. 'क्रुध् द्रुहेर्ष्यासूयार्थानां यं प्रति कोपः' । ಕ್ರೋಧ, ದ್ರೋಹ ಮುಂತಾದ ಅರ್ಥವನ್ನು ಬೋಧಿಸುವ ಧಾತುವಿದ್ದಾಗ ಯಾರ ಮೇಲೆ ಕೋಪ ಅಸಮಾಧಾನಗಳಿವೆಯೊ ಅವರಿಗೆ ಸಂಪ್ರದಾನ ಸಂಜ್ಞೆ ಬಂದು ಆ ಶಬ್ದದ ಮೇಲೆ ಚತುರ್ಥೀ ಬರುತ್ತದೆ.

रावणाय कुध्यति । मित्राय द्रुह्यति ।

ವಿಶೇಷ : 'क्रुधद्रुहोरुपसृष्टयोः कर्म' । क्रुध्, द्रुह् ಧಾತುಗಳು ಉಪಸರ್ಗ ವಿಶಿಷ್ಟವಾದಾಗ ಕರ್ಮಸಂಜ್ಞೆ ಬಂದು ದ್ವಿತೀಯಾ ಬರುತ್ತದೆ.

रावणमभिक्रुध्यति । मित्रमभिद्रुह्यति ।

5. 'नमः स्वस्ति स्वाहा स्वधालंवषड्योगाच्च' । ಈ ಶಬ್ದಗಳ ಯೋಗವಿದ್ದಲ್ಲಿ ಚತುರ್ಥೀ.

श्री गणेशाय नमः । प्रजाभ्यः स्वस्ति । अग्नये स्वाहा ।

पितृभ्यः स्वधा । भीमो बकाय अलम् । नेत्रत्रयाय वषट्-वौषट् ।

ವಿಶೇಷ : अलं ಶಬ್ದವು ನಿಷೇಧಾರ್ಥಕವಾದರೆ ತೃತೀಯಾ ಬರುತ್ತದೆ.

अलं श्रमेण । अलं विस्तरेण । अलं चेष्टया ।

6. ಗತ್ಯರ್ಥಕ ಧಾತುವಿದ್ದಾಗ ಕರ್ಮಪದದ ಮೇಲೆ ಚತುರ್ಥೀ, ದ್ವಿತೀಯಾ ಎರಡೂ ಬರುತ್ತವೆ.

ग्रामाय गच्छति । ग्रामं गच्छति ।

7. 'तादर्थ्ये चतुर्थी वाच्या' । 'ಅದಕ್ಕಾಗಿ ಇದು' ಎಂದು ಉಪಕಾರ್ಯೋಪಕಾರಕಭಾವವು ತೋರುವಾಗ ಉಪಕಾರ್ಯದ ಮೇಲೆ ಚತುರ್ಥೀ.

फलकाय दारु । कुण्डलाय हिरण्यम् । तुभ्यमिदम् ।

४. पञ्चमी

1. 'आख्यातोपयोगे' । ನಿಯಮಪೂರ್ವಕವಾದ ವಿದ್ಯಾಭ್ಯಾಸವನ್ನು ಬೋಧಿಸುವಾಗ ಗುರುವಾಚಕದ ಮೇಲೆ ಪಂಚಮೀ.

उपाध्यायादधीते । गुरुभ्यः श्रुतम् ।

2. ಲ್ಯಬಂತ ಶಬ್ದವನ್ನು ಅಧ್ಯಾಹಾರಮಾಡಿಕೊಂಡಲ್ಲಿ ಅದಕ್ಕೆ ಯಾವುದು ಕರ್ಮವಾದೀತೋ ಅದರ ಮೇಲೆ.

प्रासादात् प्रेक्षते । प्रासादमधिरुह्य प्रेक्षते ಎಂದರ್ಥ.

श्वशुरात् लज्जते । श्वशुरं वीक्ष्य लज्जते ಎಂದರ್ಥ.

3. ಹೇತುವಾಚಕದ ಮೇಲೆ ಪಂಚಮೀ, ತೃತೀಯಾ ಎರಡೂ ಬರುತ್ತವೆ. चौर्यात् चौर्येण वा बद्धः । पर्वतो वह्निमान् धूमात् धूमेन वा । ಭಯಹೇತುವಾಗಿದ್ದರೆ ಪಂಚಮಿಯು ಮಾತ್ರ. ರಕ್ಷಣಾರ್ಥಕ ಧಾತುವಿದ್ದರೂ ಭಯಹೇತುವಿನ ಮೇಲೆ ಪಂಚಮೀ. चोरात् भयम् । व्याघ्रात् त्रस्यति । चोरात् त्रायते । कष्टाद्रक्षति ।

4. अन्य, इतर ಎಂಬ ಅರ್ಥದ ಶಬ್ದಗಳಿದ್ದಾಗ ಮತ್ತು ऋते, बहिः ಶಬ್ದಗಳ ಯೋಗದಲ್ಲಿ.

घटादन्यः, तस्मादितरः, सुवर्णात् भिन्नः । कृष्णादृते । ग्रामाद् बहिः ।

5. पृथक्, विना ಶಬ್ದಗಳ ಯೋಗವಿದ್ದರೆ ಪಂಚಮೀ, ತೃತೀಯಾ, ದ್ವಿತೀಯಾಗಳು ಬರುತ್ತವೆ.

तस्मात् पृथक्, तेन पृथक्, तं पृथक् । रामाद्विना, रामेण विना, रामं विना ।

6. प्रभृति, आ ಶಬ್ದಗಳ ಯೋಗವಿದ್ದಾಗ ಪಂಚಮೀ.

भृत्यात् प्रभृति । ब्रह्मणः प्रभृति । आ ग्रामात् । आ हिमालयात् ।

7. आरभ्य ಶಬ್ದವಿದ್ದಲ್ಲಿ ಪಂಚಮೀ ಮತ್ತು ದ್ವಿತೀಯಾ.

कार्तिकमासादारभ्य । कार्तिकमासमारभ्य ।

8. 'जुगुप्साविरामप्रमादार्थानामुपसंख्यानम्' । ಈ ಅರ್ಥದ ಧಾತುಗಳಿದ್ದಾಗ ಪಂಚಮೀ ಬರುತ್ತದೆ.

पापाज्जुगुप्सते । भाषणाद्विरमति । धर्मात् प्रमाद्यति ।

५. षष्ठी

1. ಕೃದಂತಭಾವನಾಮಗಳ ಯೋಗವಿದ್ದಾಗ ಕರ್ತೃಕರ್ಮಗಳ ಮೇಲೆ ಷಷ್ಠೀ ಬರುತ್ತದೆ.

कालिदासस्य कृतिः ग्रन्थस्य लेखनम् ।

2. ण्वुल्, तृच् ಎಂಬ ಕೃತ್ ಪ್ರತ್ಯಯಗಳಿದ್ದಾಗ ಕರ್ಮವಾಚಕದ ಮೇಲೆ ಷಷ್ಠೀ.

गृहस्य कारकः, जगतः, कर्ता, चित्रस्य द्रष्टा ।

3. ತುಲ್ಯಾರ್ಥದ ಶಬ್ದವಿದ್ದಾಗ ಉಪಮಾನ ವಾಚಕದ ಮೇಲೆ ಷಷ್ಠೀ ಮತ್ತು ತೃತೀಯಾ.

चन्द्रेण तुल्यम्, चन्द्रस्य सदृशः, लतया समा, लतायाः समाना ।

ನಿರ್ಧಾರಣ ಷಷ್ಠೀ ವಿಷಯವನ್ನು ಹಿಂದೆ ತಿಳಿಸಿದೆ.

६. सप्तमी

ಸತಿ ಸಪ್ತಮೀ ಮತ್ತು ನಿರ್ಧಾರಣ ಸಪ್ತಮಿಯ ವಿಷಯವನ್ನು ಹಿಂದೆ ತಿಳಿಸಿದೆ.
स्वामिन्, ईश्वर, अधिपति ಎಂಬ ಶಬ್ದಗಳಿದ್ದಾಗ ಸಂಬಂಧಿವಾಚಕದ ಮೇಲೆ ಸಪ್ತಮೀ ಷಷ್ಠೀ ಎರಡೂ ಬರುತ್ತವೆ.

गोषु स्वामी । गवां स्वामी । अयोध्यायामधिपतिः । अयोध्याया अधिपतिः ।

ವಿಶೇಷ : ಸರ್ವನಾಮ ಮತ್ತು ಹೇತುವಾಚಕ ಶಬ್ದಗಳೆರಡನ್ನೂ ಪ್ರಯೋಗಿಸಿದಾಗ, ಹೇತು ತೋರುತ್ತಿದ್ದರೆ ಅವುಗಳ ಮೇಲೆ ಸಾಮಾನ್ಯವಾಗಿ ಎಲ್ಲ ವಿಭಕ್ತಿಗಳೂ ಬರುತ್ತವೆ.

किं निमित्तं, को हेतुर्गोविन्दो गच्छति, कं हेतुं, केन कारणेन, कस्मै प्रयोजनाय, कस्माद्धेतोः कस्य निमित्तस्य, कस्मिन् कारणे ।

२. 'विवक्षातः कारकाणि भवन्ति' । ನಮ್ಮ ವಿವಕ್ಷಾನುಸಾರವಾಗಿ ಕರ್ಮಾದಿಕಾರಕಸಂಜ್ಞೆ ಬರುವುದರಿಂದ ವಿಭಕ್ತಿಗಳೂ ಅಲ್ಲಲ್ಲಿ ಬೇರೆಯಾಗಬಹುದು. ಉದಾಹರಣೆ-अनुकरोति भगवतो नारायणस्य । ಇಲ್ಲಿ ನಾರಾಯಣನು ಕರ್ಮವಾಗುವುದರಿಂದ ದ್ವಿತೀಯಾ ಬರಬೇಕಾಗಿತ್ತು. ಆದರೆ ಕರ್ಮತ್ವವನ್ನು ವಿವಕ್ಷೆ ಮಾಡದೆ ಸಂಬಂಧ ಸಾಮಾನ್ಯವನ್ನು ವಿವಕ್ಷೆ ಮಾಡಿದ್ದರಿಂದ ಷಷ್ಠೀ ಬಂದಿದೆ.

भार्या बिभ्यति तस्मिन् काये । ಇಲ್ಲಿ ಕಾಯವು ಭಯಹೇತುವಾದ್ದರಿಂದ ಅಪಾದಾನಸಂಜ್ಞೆಯಿಂದ ಪಂಚಮೀ ವಿಭಕ್ತಿ ಬರಬೇಕಾಗಿತ್ತು. ಆದರೆ 'ಕಾಯದ ವಿಷಯದಲ್ಲಿ ಹೆದರುತ್ತಾರೆ' ಎಂಬ ಅರ್ಥ ವಿವಕ್ಷಿತವಾದ್ದರಿಂದ ಅಧಿಕರಣ ಸಪ್ತಮೀ ಬಂದಿದೆ. ಆದರೆ ಈ ವಿವಕ್ಷೆ ವ್ಯಾಕರಣ ಶಾಸ್ತ್ರಕ್ಕೆ ವಿರುದ್ಧವಾಗಿ ಲೋಕರೂಢಿಗೆ ಅಸಂಗತವಾಗಿರಬಾರದು. ಆದ್ದರಿಂದ ಕರ್ತೃವನ್ನು ಕರ್ಮವೆಂದೋ, ಕರ್ಮವನ್ನು ಅಪಾದಾನವೆಂದೋ ವಿವಕ್ಷೆ ಮಾಡಲಾಗುವುದಿಲ್ಲ.

अभ्यासः १४

कर्णाटकभाषया परिवर्तयत-

१. अस्तंगते रवौ विहङ्गा अभि नीडान्युदडयन्त । २. धिक् त्वाम्, न वेदमधीषे, न च सन्ध्यामाचरसि । ३. अधितिष्ठत्युदयगिरिं चन्द्रमसि विवेश लङ्कां हनूमान् ।

४. अन्तरेण गुरुशुश्रूषां नावाप्यते । विद्या । ५. अहर्निशं यन्त्राणि कर्कशं निनदन्ति, कथं निद्रां लभेय ? ६. कस्य हेतोः पुनरसौ चन्द्रगुप्ताय कुप्यति चाणक्यः ? ७. दुःशासनमभिक्रुध्यन् भीमः संग्राममभूमिमवतरिष्यति । ८. अचिन्त्यरचनारूपस्य जगतः कः खलु स्रष्टा भवितुमर्हति, विना सर्वशक्तात् परमेश्वरात् । ९. न वयं कस्मैचित् द्रुह्यामः, न चासूयामः, न च कस्मादपि त्रस्यामः । १०. आ सेतोरा च हिमाचलात् जीयात् गीर्वाणभारती । ११. यो धर्मान्न प्रमाद्यति, तं परित उपसर्पन्ति कल्याणानि । १२. भीमादन्यश्चेदभविष्यत् नाजेष्यत् कीचकम् ।

೯. ಪ್ರಬಂಧ ರಚನೆ

ಯಾವುದಾದರೊಂದು ವಿಷಯವನ್ನು ಕ್ರಮಬದ್ಧವಾಗಿ ನಿರೂಪಿಸುವ ವಿಸ್ತೃತವಾದ ವಾಕ್ಯರಚನೆ ಪ್ರಬಂಧವೆನಿಸುತ್ತದೆ. ಇದು ಸಾಮಾನ್ಯವಾಗಿ ಗದ್ಯರೂಪದಲ್ಲಿರುತ್ತದೆ. ಅದರಲ್ಲಿ ಸ್ಪಷ್ಟವಾದ ನಮ್ಮ ಅಭಿಪ್ರಾಯವೂ ವಿಮರ್ಶೆಯೂ ಇರಬಹುದು. ಅಥವಾ ಇತಿಹಾಸ ಪುರಾಣಗಳಿಂದ ಸಂಗ್ರಹಿಸಿದ ವಿಷಯದ ನಿರೂಪಣೆ ಕ್ರಮವರಿತು ಇರಬಹುದು. ಪ್ರಬಂಧದ ಒಟ್ಟು ತಾತ್ಪರ್ಯ ವೇನೆಂಬುದನ್ನು ಸಂಕ್ಷೇಪವಾಗಿ ತಿಳಿಸಿ ಇಲ್ಲಿ ಉಪಸಂಹಾರ ಮಾಡಬೇಕು.

ಪ್ರಬಂಧದಲ್ಲಿ ಬರವಣಿಗೆಯ ಶೈಲಿಯ ಕಡೆಗೆ ವಿಶೇಷವಾಗಿ ಗಮನವಿರಬೇಕು. ವಾಕ್ಯವು ಬಹಳ ದೊಡ್ಡದೂ ಬಹಳ ಚಿಕ್ಕದೂ ಆಗಬಾರದು. ಕನ್ನಡದಲ್ಲಿ ಕರ್ಮಣಿಪ್ರಯೋಗ ಅಷ್ಟು ಉತ್ತಮವಲ್ಲವಾದರೂ ಸಂಸ್ಕೃತದಲ್ಲಿ ಅದು ಚೆನ್ನಾಗಿ ಹೊಂದಿಕೊಳ್ಳುತ್ತದೆ. ಅಲ್ಲಲ್ಲಿ ಭಾವೇಪ್ರಯೋಗವೂ ಸಂಸ್ಕೃತಭಾಷೆಗೆ ಸೌಂದರ್ಯವನ್ನು ಕೊಡುತ್ತದೆ. ಮಿತವಾಗಿ ಉಪಮಾದ್ಯಲಂಕಾರಗಳನ್ನು ಬಳಸುವುದು ಉತ್ತಮ. ಕ್ರಿಯೆಯನ್ನು ಸೂಚಿಸುವಾಗ ಕೃದಂತಗಳಿಗಿಂತ ತಿಙಂತಗಳನ್ನು ಅಧಿಕವಾಗಿ ಬಳಸುವುದು ಲೇಸು. ವಿಭಕ್ತಿವಿಶೇಷಗಳೂ ಮತ್ತಿತರ ವ್ಯಾಕರಣ ವಿಶೇಷಗಳೂ ಶೈಲಿಯ ಸೊಗಸನ್ನು ಹೆಚ್ಚಿಸುತ್ತವೆ. ವಾಕ್ಯವು ವ್ಯಾಕರಣ ಶುದ್ಧವಾಗಿದ್ದರೂ ಅದರ ರಚನೆಯಲ್ಲಿ ಕನ್ನಡದ ಶೈಲಿಗಿಂತ ಸಂಸ್ಕೃತದ ಶೈಲಿ ಭಿನ್ನವಾದದ್ದೆಂಬುದನ್ನು ಗಮನದಲ್ಲಿಡಬೇಕು,

ಪ್ರಬಂಧಗಳನ್ನು ವಿಚಾರಾತ್ಮಕ, ಆಖ್ಯಾನಾತ್ಮಕ, ವರ್ಣನಾತ್ಮಕ- ಎಂದು ಮೂರು ಬಗೆಯಲ್ಲಿ ವಿಂಗಡಿಸಬಹುದು. ಸತ್ಸಂಗತಿ, ರಾಷ್ಟ್ರಪ್ರೇಮ, ಸದಾಚಾರ- ಮುಂತಾದುವು ವಿಚಾರಾತ್ಮಕ. ವಿದ್ಯಾರಣ್ಯರು, ಶಿವಾಜಿ, ತುಲಸೀದಾಸ- ಮೊದಲಾದವು ಆಖ್ಯಾನಾತ್ಮಕ. ಸೂರ್ಯೋದಯ, ಗಂಗಾನದಿ, ವರ್ಷಾಕಾಲ - ಮೊದಲಾದವು ವರ್ಣನಾತ್ಮಕ. ಮಾದರಿಗಾಗಿ ಕೊಟ್ಟಿರುವ ಈ ಎರಡು ಪ್ರಬಂಧಗಳನ್ನು ಗಮನಿಸಿ.

१. प्रतिज्ञापालनम्

इदं करोमीति यत् प्रतिज्ञायते सा प्रतिज्ञा । अहमस्मिन् विषये पत्रं ते लेखिष्यामि, आमन्त्रितोऽहं तस्यां सभायामुपस्थास्ये, अमुकस्मिन् समये भवद्गेहमागमिष्यामीत्यादिवचनबन्धो नामास्मादृशां प्रतिज्ञा । प्रतिज्ञापालनं हि परो धर्मः परिगणितः सज्जनव्यवहारे । प्रतिज्ञापालनं सत्यवचनान्नातिरिच्यते । अल्पका अपि लोके प्रतिज्ञातं पालयन्तो दृश्यन्ते, किमुत महान्तः ? 'अङ्गीकृतं सुकृतिनः परिपालयन्ति' इति नीतिविद आहुः । प्रतिज्ञातं चेन्न पाल्यते, बहूनामुपरोधो भवेत्, आयोजितं कार्यमाकुलीस्यात्, सत्यश्चोपहन्येत ।

परन्तु न भवन्ति सर्वाः प्रतिज्ञाः सुखनिर्वाहाः । दुःसाध्यामपि प्रतिज्ञां ये निर्वाहयन्ति, इतिहासेषु ते महान्तः संख्यायन्ते । असुव्ययो वास्तु वसुव्ययो वा, व्यूढां प्रतिज्ञां निर्वाहयन्त्यमी, न विभ्यति जातुचित् क्लेशसंकुलादपि । आह च पण्डितराजो जगन्नाथः-

विदुषां वदनाद्वाचः सहसा यान्ति नो बहिः ।
याताश्चेन्न पराञ्चन्ति द्विरदानां रदा इव ॥ इति ॥

रामायणे हि श्रीरामचन्द्रेण चतुर्दश वर्षाणि वने वासः प्रतिज्ञातः । ततो मात्रा कौसल्यया "वत्स, अहं ते जनन्यनुशास्मि । मा गा वनम्" इत्यनुशिष्टोऽपि वनवास-क्लेशबाहुल्यमगणयन् जगामैव वनम् । इत्थं किल तेन जगदे-

लक्ष्मीश्चन्द्रादपेयाद्वा हिमवान् वा हिमं त्यजेत् ।
अतीयात् सागरो वेलां न प्रतिज्ञामहं पितुः ॥ इति ॥

अग्रे च भरतेन बहुधा प्रार्थितोऽपि नायोध्यां प्रतिनिवर्तितुं संमेने । प्रथते किल श्रीरामभद्रवचनं 'रामो द्विर्नाभिभाषते' इति गाथा-कल्पम् ।

एवं हरिश्चन्द्रभीष्मयुधिष्ठिरादयो महान्तोऽन्ययुर्वहां । प्रतिज्ञां निर्वाह्य गुर्वी शाश्वतिकीं कीर्तिमधिजग्मुः ।

इत्थं लोकोत्तरधैर्यशालिना वीराग्रण्या राणाप्रतापसिंहेन कोऽपि प्रतिज्ञाभारो निर्व्यूढः । कूटयुद्धेषु वैरिभिः पराजितः प्रतापसिंहः पैतृकात् राज्यात् परिभ्रष्टः । तेन प्रतिजज्ञे "यावद्वैरिणमभिजित्य चित्तौडराज्यं वशं नानेष्ये, तावत् पत्रभाजने भोक्ष्ये, न पर्यङ्कमधिशयिष्ये, नापि नगरं प्रवेक्ष्यामि" इति । सत्स्वपि मित्रेषु राजसु सहायेषु, अतिदिष्टेपि तैर्धने, तेन निर्जनेषु कान्तरेषु भ्रान्तम् । पीतानि जीर्णपर्णकषायाणि जलानि । आमरणमनिकेतेन यायावरेण स्थितम् । प्रतिज्ञावचनन्तु न हारितम् । साधु खल्विदमुच्यते-

उदयति यदि भानु पश्चिमे दिग्विभागे
प्रचलति यदि मेरुः शीततां याति वह्निः ।

विकसति यदि पद्मं पर्वतानां शिखाग्रे
न भवति पुनरुक्तं भाषितं सज्जनानाम् ॥

तस्मादस्माभिः प्रतिज्ञातं पालनीयम् ॥

श्रीशङ्कराचार्याः

अस्ति केरलेषु पूर्णायाः सरितस्तटे कालटीनामको ग्रामः । तमध्युवास शिवगुरुर्नाम द्विजेन्द्रो, यस्य विद्याधिराज इत्यन्वर्था समाख्या प्रथते स्म । तस्य पत्न्यामार्याम्बायां लोकगुरुः श्रीशङ्करो जज्ञे । कवचहरीये वयसि वर्तमाने पुत्रे शिवगुरुः शिवसायुज्यमवाप । सुमेधाः श्रीशङ्करो मात्रा नियुक्तो गुरुकुले वेदान् शास्त्राणि चाधिजगे । अद्भुतप्रतिभोऽयं बालकः अष्टहायन एवाधीतविद्यो गुरुकुलात् समावृत्तः । निसर्गतो निवृत्तिमार्गमनुसन्दधानः श्रीशङ्करो मातरं प्रसाद्य संन्यासं गृहीतवान् । "यदहरेव विरजेत् तदहरेव प्रव्रजेत्, ब्रह्मचर्यादेव प्रव्रजेत्, गृहाद्वा वनाद्वा" इति हि समामनन्ति ।

श्रीशङ्करो निरगाद् गृहाद् गुरुमन्विष्यन् । अन्ते च नर्मदातीरवासिनः श्रीगौडपादशिष्यान् श्रीगोविन्दभगवत्पादानुपातिष्ठत । 'को भवान्' इति तैः पृष्टः श्रीशङ्करोऽब्रवीत्-

स्वामिन्नहं न पृथिवी न जलं न तेजो
न स्पर्शनो न गगनं न च तद्गुणा वा ।
नापीन्द्रियाण्यपि तु विद्धि ततोऽवशिष्टो
यः केवलोऽस्ति परमः स शिवोऽहमस्मि ॥ इति ॥

इदं निशम्य विस्मितचेतसः श्रीगोविन्दभगवत्पादाः नीशङ्करस्य प्रदीप्तया प्रज्ञया परं हर्षमुपागमन् । तञ्च शिष्यत्वेन परिगृह्य विदिताखिलशास्त्रमपि तं सांप्रदायिकेन औपनिषदब्रह्मोपदेशेन अन्वगृह्णन् । तदीयमाश्रममधिवसन् श्रीशङ्करः सारस्वतं सारसर्वस्वं पपौ ।

ततश्च गुर्वाज्ञया श्रीशङ्कराचार्याः वाराणसीं प्रस्थाय प्रस्थानत्रयस्य भाष्याणि विरचयामासुः । उपनिषदः, ब्रह्मसूत्राणि, भगवद्गीता चेति समुदितं प्रस्थानत्रयमुच्यते । कालेन बहवः शिष्यास्तानुपसेदुः । तैः परिवृता आचार्या सर्वत्र भारतदेशे संचरन्तः सौगतादीनि मतानि निराकृत्य वैदिकं मतं प्रतिष्ठापयामासुः । औपनिषदमद्वैतसिद्धान्तं प्रतिपादयामासुः ।

तस्मिन् समये विश्वरूपाभिधो मीमांसकमूर्धन्यः पण्डितवरेण्यो माहिष्मतीमध्यास्त । उभयभारतीनाम्नी तत्पत्नी सरस्वत्यवतारत्वेन प्रथिमानं गता विदुषितमा बभूव । उभावपि दंपती भगवत्पादैः शास्त्रवादे पराजितौ । विश्वरूपः पारिव्राज्यं स्वीकृत्य सुरेश्वराख्यया भगवत्पादानां शिष्यत्वमशिश्रियत् ।

आचार्याणां शिष्येषु सुरेश्वराचार्यः पद्मपादाचार्यः, हस्तामलकाचार्यः तोटकाचार्यश्चेति चत्वारः प्राधान्येन कीर्तिताः । इमे खलु सकलशास्त्रेषु निष्णाताः परमतेजस्विनः "पुमर्थाश्चत्वारः किमुत निगमा ऋक्प्रभुतयः" इत्यभिलप्यमानाः परे ब्रह्मण्यौपनिषदे रममाणान् भगवत्पादान् असेवन्त ।

पारिव्राज्यमास्थितैरपि श्रीशङ्कराचार्यैः जनन्या आर्याम्बाया अन्त्यसमये कालटीमुपसद्य मातृसेवाप्रसितैरभूयत । प्राप्तायाश्च कैवल्यं जनन्यां तस्या उत्तरक्रियां निर्वाह्य परा मातृभक्तिः प्रादर्शि ।

आसेतोरा च हिमाचलात् भगवत्पादैः पादचारेण चरित्वा सर्वत्र वैदिकं मतं निराबाधं स्थापितम् । उपदेशसाहस्रीप्रभृतयो बहवः प्रकरणग्रन्था विरचिताः । भजगोविन्दप्रभृतीनि भक्तिबहुलानि स्तोत्राणि प्रणीतानि । ततः श्रीशङ्करार्यैश्चिन्तितम् "कथं नु मया यत्नेन स्थापितो वैदिको धर्मः चिरं स्थेयात्" इति । "निर्मानमदमत्सरैः परिव्राजकैः पोष्यमाणोऽयं चिरं स्थास्यति, वर्धिष्यते च" इति निश्चित्य भरतखण्डस्य चतसृषु दिक्षु चत्वारि मठानि स्थापितानि । दक्षिणस्यां दिशि श्रीभृङ्गेरी क्षेत्रे, पूर्वस्यां दिशि जगन्नाथ क्षेत्रे, उत्तरस्यां दिशायां बदरिकायां, पश्चिमायाश्च द्वारकायामिति चत्वारि मठानि परिव्राजकाधिष्ठितानि अद्यापि राजन्तेतराम् ।

एवं श्रीशङ्कराचार्याः वैदिकधर्मसंरक्षणार्थं अनितरसाधारणं यत्नमातस्थिरे । काश्मीरदेशे प्रथितं सर्वज्ञपीठमारूह्य परां कीर्तिमधिगम्य आयुषो वर्षे द्वात्रिंशे ब्रह्मसायुज्यमवाप्नुवन् ।

अद्यत्वेऽपि भगवत्पादानां ग्रन्थाः सर्वत्र दार्शनिकैरधीयन्ते । ललितपदबन्धाः प्रसन्नगवीगुम्फाः श्रुतिवधूधम्मिल्लमल्लीस्रजः किलाचार्याणां कृतयः । आश्चर्यपरंपरा केयम् ?

अष्टवर्षे चतुर्वेदी द्वादशे सर्वशास्त्रवित् ।
षोडशे कृतवान् भाष्यं द्वात्रिंशे मुनिरभ्यगात् ।

अभ्यासः

एतान् विषयानधिकृत्य लघुप्रबन्धान् आरचयत-

१. भारतदेशः २. गणतन्त्रोत्सवः ३. सत्सङ्गतिः ४. संस्कृतभाषायाः महत्वम् ५. गणेशोत्सवः ६. तीर्थक्षेत्रम् ७. विद्यारण्यः ८. शिवाजी ९. महाभारतम् १०. सूर्योदयः ११. वर्षाकालः १२. कावेरीनदी १३. ग्रन्थालयः १४. परिसरः १५. विद्यार्थि-जीवनम् ।

೧೦. ವಾಕ್ಯರಚನೋಪಯುಕ್ತ ಚಿಹ್ನೆಗಳು

ಬರೆಯುವಾಗ ನಮ್ಮ ಎಡಬದಿಗೆ ಕಾಗದದಲ್ಲಿ ಒಂದು ಅಂಗುಲ ಅಗಲವಿರುವಂತೆ ಉದ್ದುದ್ದವಾಗಿ ಸ್ಥಳವನ್ನು ಖಾಲಿ ಬಿಡಬೇಕು. ಇದನ್ನು Margin ಎನ್ನುತ್ತಾರೆ. ಇದಕ್ಕೆ सीमा ಎಂದು ಹೇಳಬಹುದು. ಲೇಖನದಲ್ಲಿ ವಿಷಯಾಂಶವು ಬೇರೆ ಬೇರೆಯಾದಾಗ ಅಂತರ್ವಿಭಾಗವನ್ನು ಮಾಡಿಕೊಳ್ಳಬೇಕು. ಈ ಅಂತರ್ವಿಭಾಗದ ವಾಕ್ಯಸಮೂಹಕ್ಕೆ ವಾಕ್ಯಖಂಡ (Paragraph) ಎಂದು ಹೆಸರು. ವಾಕ್ಯಖಂಡದ ಆರಂಭವನ್ನು ಮುಂದಿನಸಾಲಿನಲ್ಲಿ ಮಾಡಬೇಕು. ಲೇಖನದ ಆರಂಭವನ್ನು, ವಾಕ್ಯಖಂಡದ ಆರಂಭವನ್ನು ಮಾಡುವಾಗ ಎಡಬದಿಗೆ ಸ್ವಲ್ಪ ಸ್ಥಳವನ್ನು ಖಾಲಿ ಬಿಡಬೇಕು. ಓದುಗರಿಗೆ ವಿಷಯವು ಸ್ಪಷ್ಟವಾಗಿ ಗೊತ್ತಾಗಲೆಂದು ಬರೆಯುವಾಗ ಕೆಲವು ಚಿಹ್ನೆಗಳನ್ನು ಬಳಸುತ್ತಾರೆ. ಅವು ಯಾವುವೆಂದರೆ-

१. पूर्णविरामः (Full stop) (।) ಒಂದು ವಾಕ್ಯವು ಪೂರ್ಣವಾದಾಗ ಈ ಚಿಹ್ನೆಯನ್ನು ಬಳಸಬೇಕು.

उद्यमेन कार्याणि सिध्यन्ति । यतो धर्मस्ततो जयः ।

२. अर्धविरामः (;) ವಾಕ್ಯದ ಮುಂದೆ ಇನ್ನೊಂದು ಆಶ್ರಿತವಾಕ್ಯವಿದ್ದಲ್ಲಿ ಮೊದಲನೇ ವಾಕ್ಯದ ಮುಂದೆ ಇದು ಬರುತ್ತದೆ.

रविरस्तंगतः; गावः पुनर्नागताः ।

३. अल्पविरामः (,) ಸಮಾನಶಬ್ದಗಳ ನಡುವೆ ಮತ್ತು ವಾಕ್ಯಾಂಶಗಳ ನಡುವೆ ಇದು ಬರುತ್ತದೆ.

४. प्रश्नचिह्नम् (?) ಪ್ರಶ್ನಾರ್ಥಕ ವಾಕ್ಯಗಳ ಮುಂದೆ ಬರುತ್ತದೆ. कः कोऽत्र भोः ? किमर्थमागतोऽसि ?

५. भावसूचकचिह्नम् (!) ಆಶ್ಚರ್ಯ, ಸಂತೋಷ, ಕೋಪ, ದುಃಖ ಮುಂತಾದ ಮನೋಭಾವಗಳನ್ನು ವ್ಯಕ್ತಪಡಿಸುವಾಗ ಇದನ್ನು ಬಳಸುತ್ತಾರೆ.

१. अहो ! चित्रमेतत् !

२. हंहो ! आगता माता !

३. अरे ! जाल्म, न पश्यसि मामुपस्थितम् !

४. हा ! राम, हा ! लक्ष्मण, हा ! सुमित्रे !

६. उद्धरणचिह्नम् (“ ”) ಬೇರೊಬ್ಬರು ಹೇಳಿದ ಶಬ್ದವನ್ನೋ ವಾಕ್ಯವನ್ನೋ ಸೂಚಿಸುವಾಗ ಈ ಚಿಹ್ನೆಯನ್ನು ಉಪಯೋಗಿಸಬೇಕು.

१. सूत्रकारेण “परोक्षे” इत्युक्तम् । उक्तञ्च “नीचैर्गच्छत्युपरि च दशा चक्रनेमिक्रमेण” इति ।

७. कोष्टकचिह्नम् (कंसचिह्नम्) ಇದು ಕೆಳಗಿನ ಸಂದರ್ಭಗಳಲ್ಲಿ ಬರುತ್ತದೆ.

1. ಕ್ರಮಬೋಧಕವಾದ ಸಂಖ್ಯೆ ಅಥವಾ ಅಕ್ಷರಗಳಿಗೆ.

(१) (२) (३) (४); (क) (ख) (ग) (घ)

ಇಲ್ಲಿ ಮುಂದೆ ಚುಕ್ಕೆಯನ್ನಿಡುವ ಪದ್ಧತಿಯೂ ಉಂಟು. ಚುಕ್ಕೆಗೆ ಬಿಂದುವೆಂದು ಹೆಸರು.

१.२.३.४.; क. ख. ग. घ.

2. ಅರ್ಥಸ್ಪಷ್ಟನೆಗಾಗಿ.

गतशालिवाहनशक १९०२ (क्रि. श. १९२०)

3. ವಾಕ್ಯರಚನೆಯಲ್ಲಿ ಅನನ್ವಿತವಾದಾಗ.

दुष्यन्तः (स्वगतम्) शकुन्तला (जनान्तिकम्)

८. निर्देशकचिह्नम् (-)

ಅಧ್ಯಾಹಾರ, ವಿವರಣೆ ಮತ್ತು ಸ್ಪಷ್ಟೀಕರಣಕ್ಕಾಗಿ.

१. राजा-(ವದತಿ ಎಂದು ಅಧ್ಯಾಹಾರ)

२. उदा-मनोज्ञः कालः-वसन्तः प्रादुरभूत् ।

३. ताल-हिन्ताल-कदली-पूग-नारिकेलसंकुलम्

೧೧. ಕಾವ್ಯ-ಅಲಂಕಾರ-ಛಂದಸ್ಸು

१. रमणीयार्थप्रतिपादकः शब्दः काव्यम् ।

-रसगङ्गाधरः

'ರಮಣೀಯವಾದ ಅರ್ಥವನ್ನು ಪ್ರತಿಪಾದಿಸುವ ಶಬ್ದ-ಕಾವ್ಯ'

ರಮಣೀಯವಾದ ಅರ್ಥವೆಂದರೆ ಲೋಕೋತ್ತರವಾದ ಆನಂದವನ್ನು ಉಂಟುಮಾಡುವ ವಿಷಯ. ಅದನ್ನು ವರ್ಣಿಸುವ ವಾಕ್ಯವು ಕಾವ್ಯವೆನಿಸುತ್ತದೆ. ಸಹೃದಯರೆಂದರೆ ರಸಿಕರು. ಅವರಿಗೆ ಆಗುವ ಆನಂದ ಲೋಕೋತ್ತರವಾದದ್ದು. ರಾಮಾಯಣ, ರಘುವಂಶ, ಅಭಿಜ್ಞಾನ ಶಾಕುಂತಲ, ಮಧ್ಯಮ ವ್ಯಾಯೋಗ, ಬಾಣಭಟ್ಟನ ಕಾದಂಬರಿ-ಮೊದಲಾದವು ಕಾವ್ಯಗಳು.

ಕಾವ್ಯದಲ್ಲಿ ಅರ್ಥವು ವಾಚ್ಯ, ಲಕ್ಷ್ಯ, ವ್ಯಂಗ್ಯ-ಎಂದು ಮೂರು ವಿಧ. ಲೋಕದಲ್ಲಿ ಪ್ರಸಿದ್ಧವಾದ ಮುಖ್ಯಾರ್ಥವು ವಾಚ್ಯವೆನಿಸುತ್ತದೆ. ಕೆಲವೆಡೆ ಈ

ವಾಚ್ಯಾರ್ಥವನ್ನು ತೆಗೆದುಕೊಂಡರೆ ವಾಕ್ಯದಲ್ಲಿ ಹೊಂದಿಕೆಯಾಗದೆ, ಅದಕ್ಕೆ ಸಂಬಂಧಿಸಿರುವ ಇನ್ನೊಂದು ಅರ್ಥವನ್ನು ಮಾಡಬೇಕಾಗುತ್ತದೆ. ಅದಕ್ಕೆ ಲಕ್ಷ್ಯ ಎಂದು ಹೆಸರು. ವಾಚ್ಯವೂ ಲಕ್ಷ್ಯವೂ ಅಲ್ಲದ ಮೂರನೆಯ ಅರ್ಥವೂ ಕೆಲವೆಡೆ ಹೊಳೆಯುತ್ತದೆ. ಅದಕ್ಕೆ ವ್ಯಂಗ್ಯ ಎಂದು ಹೆಸರು.

ಉದಾಹರಣೆ-

1. ಸಿಂಹ ಎಂಬ ಶಬ್ದವನ್ನು ತೆಗೆದುಕೊಳ್ಳೋಣ. ನಾಲ್ಕು ಕಾಲುಗಳಿರುವ ಒಂದಾನೊಂದು ಪ್ರಾಣಿ ಸಿಂಹ. ಇದು ಮುಖ್ಯಾರ್ಥ. ಇದನ್ನು ವಾಚ್ಯ ಎನ್ನುತ್ತಾರೆ. 'ಶಿವಾಜಿಯು ಸಿಂಹ' ಎಂಬ ವಾಕ್ಯದಲ್ಲಿ ವಾಚ್ಯಾರ್ಥವು ಹೊಂದುವುದಿಲ್ಲ. ಶಿವಾಜಿ ಮನುಷ್ಯ. ಸಿಂಹ ಒಂದು ಪ್ರಾಣಿ. ಆದ್ದರಿಂದ ಇಲ್ಲಿ ಸಿಂಹವೆಂದರೆ ಸಿಂಹಸದೃಶ ಎಂದು ಅರ್ಥಮಾಡಬೇಕು. ಇದು ಲಕ್ಷ್ಯಾರ್ಥ. ಈಗ ವಾಕ್ಯದ ಹೊಂದಾಣಿಕೆಯಲ್ಲಿ ತೊಂದರೆ ಏನೂ ಇಲ್ಲ. ಆದರೆ ಈ ಮಾತನ್ನು ಕೇಳಿದಾಗ ಶಿವಾಜಿಯು ಸಿಂಹದಂತೆ ಶೂರ ಎಂಬ ಇನ್ನೊಂದು ಅರ್ಥ ಹೊಳೆಯುತ್ತದೆ. ಶೂರ ಎಂಬುದು ವ್ಯಂಗ್ಯ.

2. 'ಅವಳ ಮನಸ್ಸು ಮಲ್ಲಿಗೆ ಹೂ'. ಇಲ್ಲಿ ಮಲ್ಲಿಗೆ ಹೂ ವಾಚ್ಯಾರ್ಥ. ಅದಕ್ಕೆ ಸಮಾನ ಎಂಬುದು ಲಕ್ಷ್ಯಾರ್ಥ. ಮಲ್ಲಿಗೆ ಹೂವಿನಂತೆ 'ಕೋಮಲ - ಒರಟುಮಾತನ್ನು ಅದು ತಾಳದೆ ನೊಂದುಕೊಳ್ಳುತ್ತದೆ' ಎಂಬುದು ವ್ಯಂಗ್ಯಾರ್ಥ.

ವಾಚ್ಯಾರ್ಥವನ್ನು ಬೋಧಿಸುವ ಶಬ್ದದ ವ್ಯಾಪಾರವನ್ನು 'ಶಕ್ತಿ ಅಥವಾ ಅಭಿಧಾ' ಎಂದೂ, ಲಕ್ಷ್ಯಾರ್ಥವನ್ನು ಬೋಧಿಸುವುದಕ್ಕೆ 'ಲಕ್ಷಣಾ' ಎಂದೂ, ವ್ಯಂಗ್ಯಾರ್ಥವನ್ನು ಬೋಧಿಸುವುದಕ್ಕೆ 'ವ್ಯಂಜನಾ' ಎಂದು ಹೆಸರು. ಆ ಶಬ್ದಗಳಿಗೆ ಕ್ರಮವಾಗಿ ವಾಚಕ, ಲಕ್ಷಕ, ವ್ಯಂಜಕ ಎಂದು ಹೆಸರು.

ಕಾವ್ಯದಿಂದಾಗುವ ಆನಂದಕ್ಕೆ ಚಮತ್ಕಾರವೆನ್ನುತ್ತಾರೆ. ಅಲಂಕಾರ, ಗುಣ, ಭಾವ, ರಸ-ಇವು ಚಮತ್ಕಾರಕ್ಕೆ ಕಾರಣಗಳು. ಇವುಗಳಿಂದ ಕಾವ್ಯವು ಸುಂದರವಾಗುತ್ತದೆ. ಇವುಗಳಲ್ಲಿ ಗುಣ, ಭಾವ, ರಸಗಳು ಯಾವಾಗಲೂ ವ್ಯಂಗ್ಯವಾಗಿರುತ್ತವೆ. ಅಲಂಕಾರವು ವ್ಯಂಗ್ಯವಾಗಬೇಕೆಂಬ ನಿಯಮವೇನೂ ಇಲ್ಲ.

ಶರೀರಕ್ಕೆ ಒಡವೆ ಇದ್ದಂತೆ ಕಾವ್ಯಕ್ಕೆ ಅಲಂಕಾರ. ಅದು ಕಾವ್ಯದ ಸೊಗಸನ್ನು ಹೆಚ್ಚಿಸುತ್ತದೆ. ಅದರಲ್ಲಿ ಶಬ್ದಾಲಂಕಾರ, ಅರ್ಥಾಲಂಕಾರ ಎಂದು ಎರಡು

ಬಗೆಯುಂಟು. ,ಒಟ್ಟು ನೂರಾರು ಅಲಂಕಾರಗಳಿವೆ. ಅವುಗಳಲ್ಲಿ ಕೆಲವು ಅಲಂಕಾರಗಳ ಪರಿಚಯವನ್ನು ಇಲ್ಲಿ ಮಾಡಿಕೊಡಲಾಗಿದೆ.

ಶಬ್ದಾಲಂಕಾರದಲ್ಲಿ ಅನುಪ್ರಾಸ, ಯಮಕ ಎಂದು ಎರಡು ಬಗೆ. ಒಂದೇ ಬಗೆಯ ಅಕ್ಷರವು ಆವೃತ್ತಿಗೊಂಡರೆ ಅನುಪ್ರಾಸ. ಒಂದೇ ಬಗೆಯ ಅಕ್ಷರ ಸಮುದಾಯವು ಆವೃತ್ತಿಗೊಂಡರೆ ಯಮಕ.

उदाहरणम्-

१. अनुप्रासः

अपसारय घनसारं [1] कुरु हारं दूर एव किं कमलैः ।
अलमलमालि मृणालैरिति वदति दिवानिशं बाला ॥

२. यमकम्

शारदा शारदाम्भोजवदना वदनाम्बुजे ।
सर्वदा सर्वदास्माकं सन्निधिः सन्निधिं क्रियात् ।

ಅರ್ಥಾಲಂಕಾರ

1. ಉಪಮಾ

ಉಪಮೇಯ ಮತ್ತು ಉಪಮಾನಗಳಿಗೆ ವರ್ಣಿಸಿರುವ ಸುಂದರವಾದ ಸಾದೃಶ್ಯ ಉಪಮಾಲಂಕಾರ. ವರ್ಣಿಸಬೇಕಾದ ವಸ್ತು ಉಪಮೇಯವೆನಿಸುತ್ತದೆ. ಅದಕ್ಕೆ ಯಾವುದರ ಹೋಲಿಕೆಯನ್ನು ಹೇಳಲಾಗಿದೆಯೋ ಅದು ಉಪಮಾನ. ಸಾದೃಶ್ಯವನ್ನು ಹೇಳುವ ಶಬ್ದಕ್ಕೆ ವಾಚಕಶಬ್ದವೆಂದು ಹೆಸರು. ಯಾವ ಧರ್ಮವನ್ನು ನಿಮಿತ್ತವಾಗಿರಿಸಿ ಸಾದೃಶ್ಯವನ್ನು ವರ್ಣಿಸಲಾಗಿದೆಯೋ ಅದು ಸಾಧಾರಣ ಧರ್ಮ.

---

1. घनसार=ಪಚ್ಚಕರ್ಪೂರ

उदा-अयं गजराजः गिरिरिवोन्नतः ।

ಇಲ್ಲಿ ಗಜರಾಜ ಉಪಮೇಯ. ಗಿರಿ ಉಪಮಾನ. 'ಇವ' ವಾಚಕ ಶಬ್ದ. ಉನ್ನತ ಶಬ್ದದಿಂದ ತೋರುವ ಔನ್ನತ್ಯ ಸಾಧಾರಣ ಧರ್ಮ. ಈ ನಾಲ್ಕು ಅಂಶಗಳೂ ಇದ್ದರೆ ಪೂರ್ಣೋಪಮೆ ಎನಿಸುತ್ತದೆ. ಯಾವುದಾದರೂ ಒಂದು ಇಲ್ಲದಿದ್ದರೆ ಲುಪ್ತೋಪಮೆ ಎನಿಸುತ್ತದೆ.

उदा-सुधेव वाणी

ಮಾತು ಅಮೃತದಂತೆ ಆಹ್ಲಾದಕವಾಗಿದೆಯೆಂದರ್ಥ. ಆಹ್ಲಾದಕತ್ವವೆಂಬ ಸಾಧಾರಣ ಧರ್ಮ ಲುಪ್ತವಾಗಿದೆ.

उदा-श्रीरामः पुण्डरीकाक्षः ।

ಶ್ರೀರಾಮನು ಕಮಲದಂತಹ ಕಣ್ಣುಳ್ಳವನು. ಇಲ್ಲಿ ಸಾದೃಶ್ಯವಾಚಕ ಶಬ್ದವೂ ಸಾಧಾರಣಧರ್ಮವೂ ಲುಪ್ತವಾಗಿದೆ. ಇದು ಧರ್ಮವಾಚಕಲುಪ್ತ.

इव, वत्, सदृश, सम, समान, निभ, संनिभ, तुल्य संकाश, प्रतिपक्ष, संवादि-ಮೊದಲಾದ ಶಬ್ದಗಳು ಸಾದೃಶ್ಯವನ್ನು ಬೋಧಿಸುತ್ತವೆ.

2. ರೂಪಕ

ಉಪಮಾನೋಪಮೇಯಗಳಿಗೆ ಭೇದವಿಲ್ಲದಂತೆ ಅವೆರಡೂ ಒಂದೇ ಎಂದು ವರ್ಣಿಸುವುದು ರೂಪಕ. ಸಾಮಾನ್ಯವಾಗಿ ಉಪಮೇಯವನ್ನು ವಿಷಯವೆಂದೂ ಉಪಮಾನವನ್ನು ವಿಷಯಿ ಎಂದೂ ಹೇಳುತ್ತಾರೆ.

उदा-

१. वाणी तव सुधा विद्वन् ।

२. इयं साक्षाल्लक्ष्मीः ।

३. अङ्गुल्यः पल्लवान्यासन् कुसुमानि नखत्विषः ।
बाहू लते वसन्तश्रीः त्वं नः प्रत्यक्षचारिणी ॥

3. ಅತಿಶಯೋಕ್ತಿ

ಇದರಲ್ಲಿ ಅನೇಕ ಪ್ರಕಾರಗಳಿವೆ. ಇಲ್ಲಿ ಮೂರು ಪ್ರಕಾರಗಳನ್ನು ತಿಳಿಸಿದೆ.

(ಅ) ಉಪಮೇಯವನ್ನು ಶಬ್ದದಿಂದ ಹೇಳದೆ ಉಪಮಾನವಾಚಕಶಬ್ದದಿಂದಲೇ ಅದನ್ನು ಗ್ರಹಿಸುವುದು ರೂಪಕಾತಿಶಯೋಕ್ತಿ.

उदा-

स्फुरत्कनककान्तिभिर्नवलताभिरावेल्लितो [1]
ममाशु हरतु श्रमानतितमां तमालद्रुमः ॥

ಇಲ್ಲಿ ಶ್ರೀಕೃಷ್ಣನನ್ನು ತಮಾಲದ್ರುಮ ಎಂದೂ, ಗೋಪಿಕೆಯರನ್ನು ನವಲತಾ ಎಂದೂ ಉಪಮಾನವಾಚಕಶಬ್ದಗಳಿಂದ ಗ್ರಹಿಸಲಾಗಿದೆ.

(ಇ) ಎರಡು ವಸ್ತುಗಳಿಗೆ ಸಂಬಂಧವಿಲ್ಲದಿದ್ದರೂ ಸಂಬಂಧವಿದೆಯೆಂದು ವರ್ಣಿಸುವುದು ಸಂಬಂಧಾತಿಶಯೋಕ್ತಿ.

उदा-सौधाग्राणि पुरस्यास्य स्पृशन्ति विधुमण्डलम् ।

ಇಲ್ಲಿ ಸೌಧಾಗ್ರಗಳಿಗೂ, ಚಂದ್ರಮಂಡಲಕ್ಕೂ ಸ್ಪರ್ಶಸಂಬಂಧವಿಲ್ಲದಿದ್ದರೂ ಇದೆಯೆಂದು ವರ್ಣಿಸಿದೆ.

(ಉ) ಎರಡು ವಸ್ತುಗಳಿಗೆ ಸಂಬಂಧವಿದ್ದರೂ ಇಲ್ಲವೆಂದು ವರ್ಣಿಸುವುದು ಅಸಂಬಂಧಾತಿಶಯೋಕ್ತಿ.

उदा-त्वयि दातरि राजेन्द्र स्वर्द्रुमान्नाद्रियामहे ।

ಇಲ್ಲಿ ಕಲ್ಪವೃಕ್ಷಗಳನ್ನು ಆದರಿಸಿದರೂ ಆದರಿಸುವುದಿಲ್ಲವೆಂದು ಅಸಂಬಂಧವನ್ನು ವರ್ಣಿಸಲಾಗಿದೆ.

---

1. आवेल्लित=ಪರಿವೃತ

4. ಉತ್ಪ್ರೇಕ್ಷಾ

ಎರಡು ವಸ್ತುಗಳಲ್ಲಿ 'ಇದು ಬೇರೆ-ಅದು ಬೇರೆ' ಎಂಬ ನಿಶ್ಚಯವಿದ್ದರೂ ಸಹ ಕೆಲವು ನಿಮಿತ್ತಗಳಿಂದ 'ಬಹುಶಃ ಇದು ಅದೇ ಆಗಿರಬೇಕು' ಎಂಬ ಊಹೆ ಉತ್ಪ್ರೇಕ್ಷೆ. ಈ ಊಹೆಯನ್ನು ಸಂಭಾವನೆ ಎನ್ನುತ್ತಾರೆ. ನಾವೇ ಕಲ್ಪಿಸಿಕೊಂಡಿರುವ ಒಂದು ಬಗೆಯ ಸಂಶಯ ಇದು. ಸಂಶಯದಲ್ಲಿ 'ಇದೊ-ಅದೊ' ಎಂದು ಎರಡಂಶಗಳು ಇರುತ್ತವೆಯಷ್ಟೆ, ಈ ಸಂಭಾವನೆಯಲ್ಲಿ 'ಬಹುಶಃ ಇದು ಅದೇ' ಎಂದು ಒಂದಂಶ ಪ್ರಬಲವಾಗಿರುತ್ತದೆ. ಇದರಲ್ಲಿ ಸ್ವರೂಪೋತ್ಪ್ರೇಕ್ಷೆ, ಹೇತೂತ್ಪ್ರೇಕ್ಷೆ, ಫಲೋತ್ಪ್ರೇಕ್ಷೆ ಎಂದು ಮೂರು ವಿಧ.

१. उदातनयमैनाकगवेषणलम्बीकृतजलधिजठरप्रविष्टहिमगिरिभुज इव भाति भागीरथी ।

'ಮಗುನಾದ ಮೈನಾಕನನ್ನು ಹುಡುಕುವುದಕ್ಕಾಗಿ ಚಾಚಲ್ಪಟ್ಟು ಸಮುದ್ರದೊಳಗೆ ಹೋಗಿರುವ ಹಿಮಾಲಯನ ಭುಜವೋ ಎಂಬಂತೆ ಗಂಗಾ ನದಿ ಪ್ರಕಾಶಿಸುತ್ತದೆ?

ಇಲ್ಲಿ ಗಂಗಾನದಿಯನ್ನು ಹಿಮಾಲಯದ ಭುಜವೆಂದು ಉತ್ಪ್ರೇಕ್ಷಿಸಲಾಗಿದೆ. ಭುಜದಂತೆ ನೀಳವಾಗಿಯೂ ಹಿಮಾಲಯದಂತೆ ಶುಭ್ರವಾಗಿಯೂ ಗಂಗಾನದಿ ಇರುವುದು ನಿಮಿತ್ತ. ಗಂಗೆ ಹಿಮವಂತನ ಭುಜವಲ್ಲ, ಇದು ಬೇರೆ ಎಂಬ ನಿಶ್ಚಯವೂ ಇದೆ. ಇದು ಉಪಮೆಯಂತೆ ತೋರಿದರೂ ಉಪಮೆಯಲ್ಲ. ಏಕೆಂದರೆ, ಗಂಗೆಯೇ ಹಿಮವಂತನ ಭುಜವಾಗಿರಬೇಕು ಎಂಬ ಅಭೇದಕಲ್ಪನೆಯುಂಟು. ಉಪಮೆಗೂ ಉತ್ಪ್ರೇಕ್ಷೆಗೂ ಸೂಕ್ಷ್ಮಭೇದವಿರುವುದನ್ನು ಗಮನಿಸಬೇಕು. ಇದಕ್ಕೆ ಸ್ವರೂಪೋತ್ಪ್ರೇಕ್ಷೆ ಅಥವಾ ವಸ್ತೂತ್ಪ್ರೇಕ್ಷೆ ಎಂದು ಹೆಸರು.

द्विनेत्र इव वासवः करयुगो विवस्वानिव ।
द्वितीय इव चन्द्रमाः श्रितवपूर्मनोभूरिव ॥

ಇದು ಒಬ್ಬ ರಾಜನ ವರ್ಣನೆ. ದ್ವಿನೇತ್ರನಾದ ವಾಸವನಿಲ್ಲವಾದ್ದರಿಂದ ಉಪಮೆಯಲ್ಲ, ಈತನು ದ್ವಿನೇತ್ರನಾಗಿ ಕಾಣಿಸುವ ಇಂದ್ರನೇ ಆಗಿರಬೇಕು ಎಂದು ಉತ್ಪ್ರೇಕ್ಷೆ. ಇಲ್ಲಿ इव ಶಬ್ದವು ಸಾದೃಶ್ಯವಾಚಕವಲ್ಲ, ಹೀಗೆಯೇ ಉಳಿದವು.

वासवः-ಇಂದ್ರ, करयुगः=ಎರಡು ಕೈಗಳುಳ್ಳ, ಎರಡು ಕಿರಣಗಳುಳ್ಳ, विवस्वान् =ಸೂರ್ಯ, मनोभूः=ಮನ್ಮಥ.

शङ्के, मन्ये, ध्रुवम्, प्रायः, नूनम् ಇವೇ ಮೊದಲಾದವು ಉತ್ಪ್ರೇಕ್ಷಾ ವ್ಯಂಜಕ ಶಬ್ದಗಳು, ಸಂಶಯ ವಿಶೇಷವೇ ಸಂಭಾವನೆ.

२. रक्तौ तवाङ्घ्री मृदुलौ भुवि विक्षेपणाद् ध्रुवम् ।

ಪಾದಗಳು ಕೆಂಪಾಗಿರಲು ಕಾರಣ ಸ್ವಭಾವ. ನೆಲದಲ್ಲಿ ಕಾಲೂರುವುದು ಅದಕ್ಕೆ ಕಾರಣವೆಂದು ಉತ್ಪ್ರೇಕ್ಷಿಸಲಾಗಿದೆ. ಇದು ಹೇತೂತ್ಪ್ರೇಕ್ಷೆ.

३. परिश्रान्तः सूर्यो ध्रुवमुपगतः स्नातुमुदधिम् ।

ಸಾಯಂಕಾಲ ಸೂರ್ಯನು ಸಮುದ್ರಕ್ಕೆ ಹೋದುದು ಸ್ನಾನಕ್ಕಾಗಿ ಎಂದು ಇಲ್ಲಿ ವರ್ಣಿಸಿದೆ. ಸ್ನಾನವು ಫಲವಲ್ಲವಾದರೂ ಅದನ್ನು ಫಲವೆಂದು ಹೇಳಿದ್ದರಿಂದ ಇದು ಫಲೋತ್ಪ್ರೇಕ್ಷೆ.

5. ಶ್ಲೇಷ

ಒಂದು ವಾಕ್ಯದಲ್ಲಿ ಅನೇಕಾರ್ಥಗಳಿರುವಂತೆ ಶಬ್ದಯೋಜನೆ ಶ್ಲೇಷಾಲಂಕಾರ.

उदा-

१. सर्वदोमाधवः पायात् स यो गंगामदीधरत् ।

२. त्रातः काकोदरो येन द्रोग्धापि करुणात्मना ।
पूतनामारणख्यातः स मेऽस्तु शरणं विभुः ॥

ಮೊದಲನೆ ಸಾಲಿನಲ್ಲಿ ವಿಷ್ಣು-ಶಿವ ಪರವಾಗಿ ಎರಡು ಅರ್ಥಗಳಿವೆ. ವಿಷ್ಣು ಪರವಾಗಿ - सर्वदः माधवः अगं गां अदीधरत् ಎಂದು ಬಿಡಿಸಬೇಕು. अग=ಗೋವರ್ಧನಗಿರಿ, गां=ಭೂಮಿಯನ್ನು ಅಥವಾ ಹಸುವನ್ನು; ಶಿವ ಪರವಾಗಿ-सर्वदा उमाधवः गङ्गामदीधरत् ।

ಎರಡನೆ ಶ್ಲೋಕದಲ್ಲಿ ರಾಮ-ಕೃಷ್ಣ ಪರವಾಗಿ ಎರಡು ಅರ್ಥಗಳಿವೆ.

ಶ್ರೀರಾಮ ಪರವಾಗಿ-काकः अदरः पूतनामा रणख्यातः ।

अदरः=ಭಯವಿಲ್ಲದ, काकः=ಕಾಕಾಸುರ.

ಶ್ರೀಕೃಷ್ಣಪರವಾಗಿ-काकोदरः=ಕಾಳಿಯಸರ್ಪ, ಪೂತನೆಯ ಮರಣದಿಂದ ಖ್ಯಾತನಾದವನು.

6. ಅರ್ಥಾಂತರನ್ಯಾಸ

ಸಾಮಾನ್ಯದಿಂದ ವಿಶೇಷವನ್ನಾಗಲಿ, ವಿಶೇಷದಿಂದ ಸಾಮಾನ್ಯವನ್ನಾಗಲಿ ಸಮರ್ಥಿಸುವ ನುಡಿ ಅರ್ಥಾಂತರನ್ಯಾಸ. ಸರ್ವಸಾಧಾರಣವಾದ ಒಂದು ಹೇಳಿಕೆ (General Statement) ಸಾಮಾನ್ಯವೆನಿಸುತ್ತದೆ. ಸಾಮಾನ್ಯದಲ್ಲಿ ಸೇರಿದ ಒಬ್ಬ ವ್ಯಕ್ತಿ ಅಥವಾ ಒಂದು ವಸ್ತುವಿಗೆ ಸಂಬಂಧಿಸಿದ ಒಂದು ಹೆಚ್ಚಿನ ಅಂಶ ವಿಶೇಷವೆನಿಸುತ್ತದೆ.

उदा-

१. हनूमानब्धिमतरत् दुष्करं किं महात्मनाम् ।

ಇಲ್ಲಿ ಸಾಮಾನ್ಯದಿಂದ ವಿಶೇಷವನ್ನು ಸಮರ್ಥಿಸಲಾಗಿದೆ.

२. गुणवद्वस्तु संसर्गाद्याति स्वल्पोऽपि गौरवम् ।
पुष्पमालानुषङ्गेण सूत्रं शिरसि धार्यते ॥

ಇಲ್ಲಿ ವಿಶೇಷದಿಂದ ಸಾಮಾನ್ಯವನ್ನು ಸಮರ್ಥಿಸಲಾಗಿದೆ.

ಇನ್ನೂ ಎರಡು ಉದಾಹರಣೆಗಳು :

१. अहन्नेको रणे रामो यातुधानाननेकशः ।
असहाया महात्मानो यान्ति काञ्चन वीरताम् ॥

अहन्=ಕೊಂದನು, यातुधानान्=ರಾಕ್ಷಸರನ್ನು

२. उपकारमेव कुरुते विपद्गतः सद्गुणो नितराम् ।
मूर्छां गतो मृतो वा रोगानपहरति पारदः सकलान् ।

पारदः=ಪಾದರಸ मूर्छां गतः=ಪರಿಶುದ್ಧಗೊಳಿಸಲ್ಪಟ್ಟದ್ದು मृतः= ಭಸ್ಮವಾಗಿ ಮಾಡಲ್ಪಟ್ಟದ್ದು.

7. ವ್ಯಾಜಸ್ತುತಿ

उदा-'उक्तिर्व्याजस्तुतिर्निन्दास्तुतिभ्यां स्तुतिनिन्दयोः' ।

ಒಬ್ಬ ವ್ಯಕ್ತಿಯ ನಿಂದೆಯಿಂದ ಆ ವ್ಯಕ್ತಿಯ ಸ್ತುತಿಯೂ, ಸ್ತುತಿಯಿಂದ ನಿಂದೆಯೂ ವ್ಯಂಗ್ಯವಾಗಿ ತೋರಿದರೆ ವ್ಯಾಜಸ್ತುತಿಯೆಂಬ ಅಲಂಕಾರ.

उदा-

१. कः स्वर्धुनि विवेकस्ते पापिनो नयसे दिवम् ।

ಇಲ್ಲಿ ಗಂಗಾನದಿಯ ನಿಂದೆಯಿಂದ ಆಕೆಯ ಮಹಿಮೆ ವ್ಯಂಗ್ಯವಾಗಿದೆ.

२. अर्धं दानववैरिणा गिरिजयाप्यर्धं शिवस्याहृतं
देवेत्थं जगतीतले स्मरहराभावे समुन्मीलति ।
गङ्गा सागरमम्बरं शशिकला नागाधिपः क्ष्मातलं
सर्वज्ञत्त्वमधीश्वरत्वमगमत्त्वां मां च भिक्षाटनम् ॥

ಕವಿಯು ರಾಜನಿಗೆ ಹೇಳುವ ಮಾತಿದು. 'ನೀನು ಸರ್ವಜ್ಞ. ಅಧೀಶ್ವರ' ಎಂದು ಸ್ತುತಿ ಇದೆ. ನನ್ನ ಕಷ್ಟವನ್ನು ತಿಳಿದಿದ್ದರೂ ದಾನಮಾಡಲು ಸಮರ್ಥನಾದರೂ ನನಗೆ ನೀನು ಏನನ್ನೂ ಕೊಡುವುದಿಲ್ಲ' ಎಂಬ ನಿಂದೆ ವ್ಯಂಗ್ಯವಾಗಿದೆ.

8. ವ್ಯಾಜನಿಂದಾ

उदा-'निन्दाया निन्दया व्यक्तिर्व्याजनिन्देति गीयते' ।

ಒಬ್ಬರ ನಿಂದೆಯಿಂದ ಇನ್ನೊಬ್ಬರ ನಿಂದೆ ವ್ಯಂಗ್ಯವಾದರೆ ವ್ಯಾಜನಿಂದೆಯೆಂಬ ಅಲಂಕಾರ.

उदा-

१. विधे स निन्द्यो यस्ते प्रागेकमेवाहरच्छिरः ।

ಕಷ್ಟಕ್ಕೆ ಸಿಕ್ಕಿದ ಒಬ್ಬನು ಬ್ರಹ್ಮನನ್ನು ನಿಂದಿಸುವ ಮಾತು ಇದು. 'ಬ್ರಹ್ಮ, ನೀನು ನಿಂದ್ಯನಲ್ಲ. ನಿನ್ನ ಒಂದು ತಲೆಯನ್ನು ಮಾತ್ರ ಕತ್ತರಿಸಿದ ಶಿವನು ನಿಂದ್ಯ'. ಇಲ್ಲಿ ಶಿವನ ನಿಂದೆಯಿಂದ ವಾಸ್ತವವಾಗಿ ಬ್ರಹ್ಮನ ನಿಂದೆಯೇ ವ್ಯಂಗ್ಯವಾಗಿದೆ.

२. विधिरेव विशेषगर्हणीयः करट[1]त्वं रट कस्तवापराधः ।
सहकारतरौ चकार यस्ते सहवासं सरलेन कोकिलेन ॥

ಇಲ್ಲಿ ಬ್ರಹ್ಮನ ನಿಂದೆಯಿಂದ ಕಾಗೆಯ ನಿಂದೆಯೇ ವ್ಯಂಗ್ಯವಾಗಿದೆ.

9. ವಕ್ರೋಕ್ತಿ

ಒಂದು ಮಾತಿಗೆ ಚಮತ್ಕಾರದಿಂದ ಅರ್ಥಾಂತರವನ್ನು ಕಲ್ಪಿಸಿ ಹೇಳುವುದು ವಕ್ರೋಕ್ತಿ.

उदा-

१. मुञ्च मानं दिनं प्राप्तं नेह नन्दी हरान्तिके ।

"दिनं प्राप्तम्=ಹಗಲು ಬಂದಿತು. मानं मुञ्च=ಕೋಪವನ್ನು ಬಿಡು" ಎಂಬುದು ಹೇಳಿದವರ ಅಭಿಪ್ರಾಯ. ಆದರೆ प्राप्तं नन्दिन मा मुञ्च=ಬಂದಿರುವ ನಂದಿಯನ್ನು ಬಿಡಬೇಡ' ಎಂದು ಅರ್ಥಾಂತರವನ್ನು ಕಲ್ಪಿಸಿ, 'नेह नन्दी हरान्तिके' ಎಂದು ಉತ್ತರವನ್ನು ಕೊಡಲಾಗಿದೆ.

---

1. करट=ಕಾಗೆ

२. भिक्षार्थी स क्व यातः, सुतनु बलिमखे, ताण्डवं क्वाद्य भद्रे
मन्ये वृन्दावनान्ते क्व नु स मृगशिशुर्नैव जाने वरोहम् ।
बाले कच्चिन्न दृष्टो जरठवृषपतिर्गोप एवास्य वेत्ता
लीला संलाप इत्थं जलनिधिहिमवत्कन्ययोस्त्रायतां नः ॥

10. ಸಾರಾಲಂಕಾರ

उदा-'उत्तरोत्तरमुत्कर्षः सार इत्यभिधीयते ।'

ಪೂರ್ವಕ್ಕಿಂತ ಉತ್ತರೋತ್ತರವಸ್ತುವಿನಲ್ಲಿ ಅತಿಶಯವನ್ನು ವರ್ಣಿಸುವುದು ಸಾರಾಲಂಕಾರ.

उदा- १. मधुरं मधु तस्माच्च सुधा तस्याः कवेर्वचः ।
२. गिरिर्महान् गिरेरब्धिर्महानब्धेर्नभो महत् ।
नभसोऽपि महद्ब्रह्म ततोऽप्याशा गरीयसी ॥

ಛಂದಸ್ಸು

ಛಂದಸ್ಸಿನ ನಿಯಮಕ್ಕೆ ಒಳಗಾದ ವಾಙ್ಮಯಕ್ಕೆ ಶ್ಲೋಕವೆಂದೂ, ಪದ್ಯವೆಂದೂ ಹೆಸರು. ಈ ನಿಯಮಕ್ಕೆ ಒಳಪಡದ ವಾಙ್ಮಯವು ಗದ್ಯವೆನಿಸುತ್ತದೆ. ಛಂದಸ್ಸಿನಲ್ಲಿ ಮಾತ್ರಾಚ್ಛಂದಸ್ಸು, ವರ್ಣಚ್ಛಂದಸ್ಸು ಎಂದು ಎರಡು ವಿಧ. ಮಾತ್ರಚ್ಛಂದಸ್ಸಿನ ಶ್ಲೋಕವನ್ನು ಜಾತಿಯೆಂದೂ, ವರ್ಣಚ್ಛಂದಸ್ಸಿನ ಶ್ಲೋಕವನ್ನು ವೃತ್ತವೆಂದೂ ಹೇಳುತ್ತಾರೆ. ಎರಡನ್ನೂ ವೃತ್ತವೆಂದು ವ್ಯವಹರಿಸುವುದೂ ಉಂಟು. ವರ್ಣವೆಂದರೆ ಅಕ್ಷರ. ಈ ವರ್ಣಚ್ಛಂದಸ್ಸಿಗೆ ಸೇರಿದ ಕೆಲವು ವೃತ್ತಗಳ ಪರಿಚಯವನ್ನು ಇಲ್ಲಿ ಕೊಟ್ಟಿದೆ.

ಮೂರು ಅಕ್ಷರಗಳ ಅಥವಾ ವರ್ಣಗಳ ಗುಂಪಿಗೆ ಗಣವೆಂದು ಹೆಸರು. ಗಣದಲ್ಲಿ ಲಘು ಗುರು ವರ್ಣಗಳಿರುತ್ತವೆ. ಅಕ್ಷರದಲ್ಲಿರುವ ಸ್ವರವನ್ನು ಅನುಸರಿಸಿ ಲಘು-ಗುರು ಎಂಬ ವಿಭಾಗವಾಗುತ್ತದೆ. ಹ್ರಸ್ವಸ್ವರಕ್ಕೆ ಲಘುವೆಂದೂ, ದೀರ್ಘಸ್ವರಕ್ಕೆ ಗುರುವೆಂದೂ ಸಂಜ್ಞೆ. ಉದಾ :- ಲಘು=ಅ, ಇ, ದ, ದಿ. ಗುರು=ಆ, ಈ, ಏ,

ಐ, ಓ, ಗಾ, ಗೀ, ಗೇ, ಗೈ, ಗೋ. ಹ್ರಸ್ವಸ್ವರದ ಮುಂದೆ ವಿಸರ್ಗ, ಅನುಸ್ವಾರ ಅಥವಾ ಸಂಯುಕ್ತಾಕ್ಷರವಿದ್ದರೆ ಆ ಹ್ರಸ್ವವು ಗುರುವೆನಿಸುತ್ತದೆ. ಉದಾ: - ರಾಮಃ, ಜ್ಞಾನಂ, ಅಸ್ತಿ. ಇಲ್ಲಿ ಹ್ರಸ್ವಅಕಾರವನ್ನು ಗುರುವೆಂದು ತಿಳಿಯಬೇಕು.

ಶ್ಲೋಕದ ನಾಲ್ಕನೇ ಒಂದು ಭಾಗಕ್ಕೆ ಪಾದವೆಂದು ಹೆಸರು. ಒಂದು ಶ್ಲೋಕದಲ್ಲಿ ನಾಲ್ಕು ಪಾದಗಳಿದ್ದು, ಸಾಮಾನ್ಯವಾಗಿ ಒಂದು ಪಾದದ ಲಕ್ಷಣ ಉಳಿದ ಮೂರು ಪಾದಗಳಲ್ಲಿಯೂ ಬರುತ್ತದೆ. ಕೆಲವೆಡೆ ಬೇರೆ ಲಕ್ಷಣವಿರುವುದುಂಟು. ಪಾದದ ಕಡೆಯಲ್ಲಿರುವ ಲಘುವನ್ನು ಗುರುವೆಂದೂ ಸಹ ತಿಳಿಯಬಹುದು.

ಯಗಣ, ರಗಣ, ತಗಣ, ಭಗಣ, ಜಗಣ, ಸಗಣ, ಮಗಣ, ನಗಣ- ಎಂದು ಗಣಗಳು ಎಂಟು.

आदिमध्यावसानेषु यरता यान्ति लाघवम् ।
भजसा गौरवं यान्ति मनौ तु गुरुलाघवम् ॥

ಮುಂದೆ ಲಘುವನ್ನು ᑌ ಚಿಹ್ನೆಯಿಂದಲೂ, ಗುರುವನ್ನು - ಚಿಹ್ನೆಯಿಂದಲೂ ಗುರುತಿಸಲಾಗಿದೆ. ವಿವರಣೆ-

ಯಗಣ	(ಆದಿಲಘು), (ಉಳಿದವು ಗುರು)	=ಯಶೋದಾ	ᑌ - -
ರಗಣ	(ಮಧ್ಯಲಘು),	=ದೇವಕೀ	- ᑌ -
ತಗಣ	(ಅಂತ್ಯಲಘು)	=ಜಾನಾತಿ	- - ᑌ
ಭಗಣ	(ಆದಿಗುರು)	=ಧಾವತಿ	- ᑌ ᑌ
ಜಗಣ	(ಮಧ್ಯಗುರು)	=ದದಾತಿ	ᑌ - ᑌ
ಸಗಣ	(ಅಂತ್ಯಗುರು)	=ವನಿತಾ	ᑌ ᑌ -
ಮಗಣ	(ಸರ್ವಗುರು)	=ಸಂತಪ್ತಃ	- - -
ನಗಣ	(ಸರ್ವಲಘು)	=ಭವತಿ	ᑌ ᑌ ᑌ

ಗಣಗಳನ್ನು ಗುರುತಿಸಲು 'यमाताराजभानसलगं' ಎಂಬ ಒಂದು ಲಘುಸೂತ್ರವಿದೆ.

ಯಮಾತಾ (ಆದಿಲಘು) =ಯಗಣ

ಮಾತಾರಾ (ಸರ್ವಗುರು) =ಮಗಣ
ತಾರಾಜ (ಅಂತ್ಯಲಘು) =ತಗಣ

ಹೀಗೆಯೇ ಉಳಿದವು. ಮೊದಲನೆಯ ಅಕ್ಷರವು ಆಯಾ ಗಣವನ್ನು ಸೂಚಿಸುತ್ತದೆ. ಲ=ಲಘು, ಗಂ (ಗಃ)=ಗುರು.

१. इन्द्रवज्रा

लक्षणम्-स्यादिन्द्रवज्रा यदि तौ जगौ गः ।

उदा- निष्कम्पवृक्षं निभृतद्विरेफं
मूकाण्डजं शान्तमृगप्रचारम् ।
तच्छासनात् काननमेव सर्वं
चित्रार्पितारम्भ इवावतस्थे ॥

२. उपेन्द्रवज्रा

लक्षणम्-उपेन्द्रवज्रः जतजास्ततो गौ ।

उदा- स दक्षिणापाङ्गनिविष्टमुष्टिं
नतांसमाकुञ्चितसव्यपादम् ।
ददर्श चक्रीकृतचारुचापं
प्रहर्तुमभ्युद्यतमात्मयोनिम् ॥

३. उपजातिः

लक्षणम्-अनंतरोदीरितपादभाजौ
पादौ यदीयावुपजातयस्ताः ॥

उदा- तमाशुविघ्नं तपसस्तपस्वी
वनस्पतिं वज्र इवावभज्य ।
स्त्रीसंनिकर्षं करिहर्तुमिच्छ-
न्नन्तर्दधे भूतपतिः सभूतः ॥

ಟಿಪ್ಪಣಿ : 'ಅವಭಜ್ಯ' ಎಂಬ ಶಬ್ದದ ಕಡೆಯ ಹ್ರಸ್ವವು ಪಾದಾಂತದಲ್ಲಿ ಇರುವುದರಿಂದ ಗುರುವೆಂದು ಗಣಿಸಬೇಕು. ಎಲ್ಲ ಕಡೆಯೂ ಆಯಾ ಲಕ್ಷಣ ವಾಕ್ಯವೇ ಆಯಾ ವೃತ್ತಕ್ಕೆ ಉದಾಹರಣೆಯಾಗುವುದೆಂಬುದನ್ನು ಗಮನಿಸಬೇಕು.

४. वशंस्थम्

लक्षणम्-जतौ तु वंशस्थमुदीरितं जरौ ।

उदा- तथा ससक्षं दहता मनोभुवं
पिनाकिना भग्नमनोरथा सती ।
निनिन्द रूपं हृदयेन पार्वती
प्रियेषु सौभाग्यफला हि चारुता ॥

५. वसन्ततिलका

लक्षणम्-उक्ता वसन्ततिलका तभजा जगौ गः ।

उदा- तं वीक्ष्य वेपथुमती सरसाङ्गयष्टिः
निक्षेपणाय पदमुद्धृतमुद्वहन्ती ।
मार्गाचलव्यतिकराकुलितेव सिन्धुः
शैलाधिराजतनया न ययौ न तस्थौ ॥

६. अनुष्टुप्

ಇದರಲ್ಲಿ ಒಂದು ಪಾದಕ್ಕೆ ಎಂಟು ಅಕ್ಷರಗಳಂತೆ ಒಟ್ಟು ಮೂವತ್ತೆರಡು ಅಕ್ಷರಗಳಿರುತ್ತವೆ. ಎಲ್ಲ ಪಾದಗಳ ಐದನೆಯ ಅಕ್ಷರ ಲಘುವಾಗಿದ್ದು ಆರನೆಯದು ಗುರುವಾಗಿರಬೇಕು. ಅಲ್ಲದೆ 2-4ನೆಯ ಪಾದಗಳ ಸಪ್ತಮಾಕ್ಷರವು ಲಘುವಾಗಿದ್ದು, 1-3ನೆಯ ಪಾದಗಳ ಸಪ್ತಮಾಕ್ಷರವು ಗುರುವಾಗಿರಬೇಕು.

लक्षणम्- श्लोके षष्ठं गुरु ज्ञेयं सर्वत्र लघु पञ्चमम् ।
द्वितीयतुर्ययोर्ह्रस्वं सप्तमं गुरु चान्ययोः ॥

उदा- स राज्यं गुरुणा दत्तं प्रतिपद्याधिकं बभौ ।
दिनान्ते निहितं तेजः सवित्रेव हुताशनः ॥

ಅನುಷ್ಟುಪ್ ವೃತ್ತಕ್ಕೆ ಶ್ಲೋಕವೆಂದು ಹೆಸರು. ಸಾಮಾನ್ಯವಾಗಿ ಎಲ್ಲ ಪದ್ಯಗಳನ್ನೂ ಶ್ಲೋಕವೆನ್ನುವುದುಂಟು.

७. वियोगिनी

लक्षणम्- विषमे समजा गुरुः समे सभरा लोऽथ गुरुर्वियोगिनी ॥

ವಿಷಮಪಾದದಲ್ಲಿ ಎಂದರೆ 1 ಮತ್ತು 3ನೇ ಪಾದಗಳಲ್ಲಿ ಸಗಣ, ಸಗಣ, ಜಗಣ ಮತ್ತು ಒಂದು ಗುರು ಇರಬೇಕು. ಸಮಪಾದದಲ್ಲಿ ಎಂದರೆ 2 ಮತ್ತು 4ನೇ ಪಾದಗಳಲ್ಲಿ ಸಗಣ, ಭಗಣ, ರಗಣ, ಒಂದು ಲಘು ಮತ್ತು ಒಂದು ಗುರು ಇರಬೇಕು. ವಿಯೋಗಿನೀ ವೃತ್ತಕ್ಕೆ ಲಲಿತಾ, ಸುಂದರೀ ಎಂದೂ ಹೆಸರಿದೆ.

उदा- भथ तं सवनाय दीक्षितः
प्रणिधानाद्गुरुराश्रमस्थितः ।
अभिषङ्गजडं विजज्ञिवा-
निति शिष्येण किलान्वबोधयत् ॥

८. तोटकम्

लक्षणम्- इह तोटकमम्बुधिसैः प्रमितम् ।

ಅಂಬುಧಿ ಎಂದರೆ ನಾಲ್ಕು ಸಂಖ್ಯೆ. ಪ್ರತಿಯೊಂದು ಪಾದದಲ್ಲಿ ಕ್ರಮವಾಗಿ ನಾಲ್ಕು ಸಗಣಗಳಿರಬೇಕು.

उदा- स तथेति विनेतुरुदारमतेः
प्रतिगृह्य वचो विससर्ज मुनिम् ।
तदलब्धपदं हृदि शोकघने
प्रतियातमिवान्तिकमस्य गुरोः ॥

श्री सुरसरस्वती सभा (रि.), शृङ्गेरि

शङ्करमठस्य आवरणम्, शङ्करपुरम्, बेङ्गलूरु-४

१.	संस्कृतभाषादीपिका	(प्रथमा)	१०-००
२.	संस्कृतभाषादीपिका	(द्वितीया)	१५-००
३.	संस्कृतभाषादीपिका	(तृतीया)	१०-००
४.	संस्कृतभाषादीपिका	(तुरीया)	१५-००
५.	संस्कृतभाषादीपिका	(प्रवेशः)	१५-००
६.	अनुवादप्रदीपः	भागः-१	१०-००
७.	अनुवादप्रदीपः	भागः-२	१०-००
८.	अनुवादप्रदीपः	भागः-३	१५-००
९.	संस्कृतभाषादीपिका	प्रथमा English	१२-००
१०.	संस्कृतभाषादीपिका	द्वितीया English	१५-००
११.	अनुवादप्रदीपः	भागः-१ English	१५-००
१२.	संस्कृतशब्दचन्द्रिका	Kannada	२०-००
१३.	संस्कृतशब्दचन्द्रिका	English	३०-००

मुद्रणस्थाः ग्रन्थाः

१४.	अनुवादप्रदीपः	भागः-२ English
१५.	अनुवादप्रदीपः	भागः-३ English

Printed at : VAGARTHA, 149, 8th Cross, N.R. Colony, Bangalore-19.